ಅಕ್ಟೋಬರ್ ಮಹಾ ಕ್ರಾಂತಿ ಚಿರಾಯುವಾಗಲಿ !

ಸಂಪುಟ 6 ಸಂಚಿಕೆ 2
೧೦—೧೧—'೫೭

ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಪುಟ ೧೦ ಬೆಲೆ: ೧೩ ನ. ಪೈಸೆ

ನವೆಂಬರ್ 7, ಸೋವಿಯತ್ ಜನತೆ ಅಕ್ಟೋಬರ್ ಮಹಾಕ್ರಾಂತಿಯ ನಲವತ್ತನೆಯ ವಾರ್ಷಿಕೋತ್ಸವವನ್ನು ವೈಭವದಿಂದ ಆಚರಿಸುತ್ತಿದ್ದಾರೆ. ಅವರೊಂದಿಗೆ ಎಲ್ಲ ಸಮಾಜವಾದಿ ದೇಶಗಳ ಜನತೆ, ಎಲ್ಲ ದೇಶಗಳ ಶ್ರಮ-ಜೀವಿ ವರ್ಗ ಮತ್ತು ದುಡಿಯುವ ಜನತೆ ಈ ದಿನವನ್ನಾಚರಿಸುತ್ತಿದ್ದಾರೆ. ಈ ಮಹಾದಿನದಂದು ಸೋವಿಯತ್ ಜನತೆಗೆ ನಾವು ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಸೋವಿಯತ್ ಜನತೆ ಈ ನಲ್ವತ್ತು ವರ್ಷಗಳಲ್ಲಿ ಅದ್ಭುತವಾದ ವಿಜಯಗಳನ್ನು ಗಳಿಸಿ ಇಂದು ಕಮ್ಯೂನಿಸಂನತ್ತ ತೀವ್ರಗತಿಯಿಂದ ಸಾಗುತ್ತಿದೆ. ಸೋವಿಯತ್ ರಷ್ಯ ಈ ದಶಕದಲ್ಲಿ ವೈಜ್ಞಾನಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಇತರೇ ಕ್ಷೇತ್ರಗಳಲ್ಲಿ ಅದ್ಭುತವಾದ ಪ್ರಗತಿಯನ್ನು ಸಾಧಿಸಿದೆ.

ಅಕ್ಟೋಬರ್ ಮಹಾಕ್ರಾಂತಿಯ ನಂತರದ ನಾಲ್ವತ್ತು ವರ್ಷಗಲ್ಲಿ ಸಮಾಜವಾದವು ಅದ್ಭುತವಾಗಿ ಮುಂದೆ ಸಾಗಿದೆ. ಅಕ್ಟೋಬರ್ ಮಹಾಕ್ರಾಂತಿಯ ವಿಜಯದಿಂದ ಅಂದು ರಷ್ಯದಲ್ಲಿ ಮಾತ್ರವೇ ಸಮಾಜವಾದದ ಅರುಣೋದಯವಾಯಿತು. ಆದರೆ ಇಂದು ವಿಶ್ವದ ಮೂರನೆ ಒಂದು ಭಾಗ ಜನತೆ ಸಮಾಜವಾದದ ಅಡಿಯಲ್ಲಿದೆ.

ಮಾರ್ಕ್ಸವಾದ—ಲೆನಿನ್ ವಾದವು ಮಹತ್ವವಾಗಿ ಬೆಳವಣಿಗೆಯಾಗಿ, ತೀವ್ರವಾಗಿ ಮುನ್ನಡೆದಿದೆ. ರಾಷ್ಟ್ರೀಯ ಬಂಧ ವಿಮೋಚನಾ ಹೋರಾಟಗಳು, ಹೊಸದಾಗಿ ಸ್ವಾತಂತ್ರ್ಯ ಪಡೆದಿರುವ ದೇಶಗಳು ಸ್ವತಂತ್ರವಾದ ಅಭಿವೃದ್ಧಿಗಾಗಿ ನಡೆಸುತ್ತಿರುವ ಯತ್ನ, ವಿಶ್ವವ್ಯಾಪಿಯಾಗಿ ನಡೆಯುತ್ತಿರುವ ಶಾಂತಿ ಚಳುವಳಿಯು ಇದಕ್ಕೆ ಸಾಕ್ಷಿಯಾಗಿದೆ.

ಸಮಾಜವಾದವು ವಿಶ್ವ ಪದ್ಧತಿಯಾಗಿ ಇಂದು ಹೊರಬಂದಿದೆ. ಇದರ ಒತ್ತಡದಿಂದಾಗಿ ಸಾಮ್ರಾಜ್ಯವಾದವು ಕುಸಿದು ಬೀಳುತ್ತಿದೆ ಮತ್ತು ಬಂಡವಾಳಶಾಹಿಯು ಬಿಕ್ಕಟ್ಟಿನಲ್ಲಿ ಕೊಳೆಯುತ್ತಿದೆ

ಇತಿಹಾಸವು ಇಂದು ಅಕ್ಟೋಬರ್ ಮಹಾಕ್ರಾಂತಿಯ ವಿಜಯ ಪತಾಕೆಯಡಿಯಲ್ಲಿ ಮುನ್ನಡೆಯುತ್ತಿದೆ. ಅಕ್ಟೋಬರ್ ಮಹಾಕ್ರಾಂತಿಯಿಂದ ಸ್ಫೂರ್ತಿ ಹೊಂದಿರುವ ಕೋಟ್ಯಾಂತರ ಜನತೆ, ಅದರ ಉನ್ನತ ಧ್ಯೇಯಗಳನ್ನು ಸ್ಥಾಪಿಸಲು ಶ್ರಮಿಸುತ್ತಿದ್ದಾರೆ.


ಸಮಾಜವಾದವು ತೀವ್ರವಾಗಿ ಮುನ್ನಡೆಯುತ್ತಿರುವ ಇಂದು ಸಾಮ್ರಾಜ್ಯಶಾಹಿಯು ಸೋಲಿನ ಮೇಲೆ ಸೋಲನ್ನನುಭವಿಸುತ್ತಿದೆ. ರಾಷ್ಟ್ರೀಯ ಬಂಧ ವಿಮೋಚ ಚಳುವಳಿಯು ಹೊಸ ವಿಜಯಗಳನ್ನು ಗಳಿಸಿದೆ. ಭಾರತವು ಸ್ವಾತಂತ್ರ್ಯವನ್ನು ಪಡೆದುದು ಮತ್ತು ವಾಷಾ-ಆಫ್ರಿಕಾ ದೇಶಗಳು ಸ್ವಾತಂತ್ರ್ಯವನ್ನು ಗಳಿಸಿರುವುದು ನಮ್ಮ ಕಾಲದಲ್ಲಿನ ಮಹತ್ವಪೂರ್ಣ ಘಟನೆಯಾಗಿದೆ.

ಮಾರ್ಕ್ಸ್-ಎಂಗೆಲ್ಸ್-ಲೆನಿನ್-ಸ್ಟಾಲಿನರ ಭೋದನೆಯನ್ನು ಅಂಗೀಕರಿಸಿ ಶ್ರಮಜೀವಿ ಜನತೆ ನಿಜವಾದ ಸ್ವಾತಂತ್ರ್ಯ ಏಳಿಗೆಗಾಗಿ ಮುನ್ನಡೆಯುತ್ತಿದೆ.

ಅಕ್ಟೋಬರ್ ಮಹಾಕ್ರಾಂತಿಯ ವಿಜಯ ದಿನದಂದು ಸೋವಿಯತ್ ಸರಕಾರವು ಶಾಂತಿ ಮತ್ತು ಸ್ನೇಹ ಸೌಹಾರ್ದಗಳೇ ತನ್ನ ವಿದೇಶಾಂಗ ನೀತಿಯ ಸೂತ್ರವೆಂದು ಘೋಷಿಸಿತು. ಈ ನಲ್ವತ್ತು ವರ್ಷಗಳಲ್ಲಿ ಅದು ಈ ನೀತಿಯನ್ನು ಎಡೆಬಿಡದೆ ಪಾಲಿಸುತ್ತಾ ಬಂದಿದೆ. ಈ ದಿಶೆಯಲ್ಲಿ ಮಹತ್ತರವಾದ ವಿಜಯಗಳನ್ನು ಗಳಿಸಿದೆ.

ಭಾರತ-ರಷ್ಯ ಸ್ನೇಹ ಬಾಂಧವ್ಯವು ಈಚಿಗಿನ ವರ್ಷಗಳಲ್ಲಿ ಅತ್ಯಂತ ಮಹತ್ವಪೂರ್ಣವಾಗಿ ಬೆಳೆದಿದೆ. ಭಾರತದ ಜನತೆಗೆ ಸೋವಿಯತ್ ಜನತೆಯ ಬಗೆಗೆ ಅಪಾರವಾದ ವಿಶ್ವಾಸ ಮತ್ತು ಸ್ನೇಹವಿದೆ. ಭಾರತ-ರಷ್ಯ-ಚೀಣಗಳ ನಡುವೆ ಸ್ನೇಹ ಸಹಕಾರವು ಮಾನವಕೋಟಿಯ ಪ್ರಗತಿಗೆ ಅದ್ಭುತವಾದ ಕಾಣಿಕೆಯೆಂದು ಲೆನಿನ್ನರು ಬಹಳ ಮುಖ್ಯತ್ವವನ್ನಿತ್ತಿದ್ದರು. ಈ ಸ್ನೇಹ ಸೌಹಾರ್ದಗಳು ದೃಢವಾಗಿ ಬೆಳೆಯಲಿ ಎಂದು ಹಾರೈಸುತ್ತೇವೆ.

★ ನಲುವತ್ತನೆ ವಾರ್ಷಿಕೋತ್ಸವದಂದು ಸೋವಿಯತ್ ಜನತೆಗೆ ನಮ್ಮ ಅಭಿನಂದನೆಗಳು



ಸಮಾಜವಾದ ಶಿಲ್ಪಿ ಲೆನಿನ್

ಅಕ್ಟೋಬರ್ ಮಹಾಕ್ರಾಂತಿಯ ನಂತರದಲ್ಲಿ ಅದ್ಭುತವಾದ ವಿಜಯಗಳನ್ನು ಸಾಧಿಸಿರುವ ಸಮಾಜವಾದವು ಇನ್ನಷ್ಟು ಹೊಸ ವಿಜಯಗಳನ್ನು ಸಾಧಿಸಲಿ ಎಂದು ಹಾರೈಸುತ್ತೇವೆ. ಸಮಾಜವಾದವನ್ನು ಸ್ಥಾಪಿಸಿ ಕಮ್ಯೂನಿಸಂನತ್ತ ಸಾಗುತ್ತಿರುವ ಸೋವಿಯತ್ ಜನತೆಗೆ, ಸರಕಾರಕ್ಕೆ ಮತ್ತು ನಾಯಕತ್ವದಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ದಿಗ್ವಿಜಯ ದೊರಕಲೆಂದು ಹಾರೈಸುತ್ತೇವೆ.

ಅಕ್ಟೋಬರ್ ಮಹಾಕ್ರಾಂತಿ ಚಿರಾಯುವಾಗಲಿ !

ಭಾರತ — ರಷ್ಯ ಸ್ನೇಹ ಚಿರಾಯುವಾಗಲಿ !

ವಿಶ್ವಶಾಂತಿ ಚಿರಾಯುವಾಗಲಿ !

ಕಮ್ಯೂನಿಸ್ಟ್ ಪಾರ್ಟಿಯ ಅಭಿನಂದನೆ

ರಷ್ಯದ ಮಹಾಕ್ರಾಂತಿಯ 40ನೇ ವರ್ಧಂತಿಯ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿಯು ಸೋವಿಯತ್ ಸರಕಾರದ ಭಾರತ ಪ್ರತಿನಿಧಿಗೆ ತಂತಿ ಮೂಲಕ ಸೋವಿಯತ್ ಸರಕಾರಕ್ಕೂ, ಜನತೆಗೂ ಅಭಿನಂದನೆಯನ್ನು ಕಳುಹಿಸಿದೆ.

ತುಮಕೂರು ಜಿಲ್ಲಾ ರೈತ ಸಮ್ಮೇಳನದಲ್ಲಿ ಸೋವಿಯತ್ ಕ್ರಾಂತಿಯನ್ನು ಅಭಿನಂದಿಸುವ ವಿಶೇಷ ನಿರ್ಣಯವನ್ನು ಪ್ರಚಂಡ ಕರತಾಡನಗಳೊಡನೆ ಮಾಡಲಾಗಿದೆ.



ಬುಲ್ಗಾನಿನ್ ಮತ್ತು ಕ್ರುಶ್ಚೆವ್ ಭಾರತದ ನಾಯಕರೊಂದಿಗೆ

ಸೋಮವಾರಪೇಟೆಯಲ್ಲಿ ಪ್ಲಾಂಟರುಗಳ ರಾಜ್ಯ

ಕಾಫಿ ವ್ಯವಸಾಯಕ್ಕೆ ಸೋಮವಾರ ಪೇಟೆ ಮತ್ತದರ ಸುತ್ತಮುತ್ತಲಿನಲ್ಲಿರುವ ಜಾಗಕ್ಕಿಂತ ಉತ್ತಮವಾದ ಜಾಗ ಬೇರೆಲ್ಲೂ ಇರುವುದಿಲ್ಲ. ಸಾಕಮ್ಮ, ಸಿದ್ದಣ್ಣ, ದಾಸಪ್ಪ, ಬಸಪ್ಪ, ನಾರಾಯಣ ಶೆಟ್ಟಿ, ಮ್ಯಾಂಗಲ್ ಬ್ರದರ್ಸ್ ಮೊದಲಾದ ಕಾಫಿ ಪ್ಲಾಂಟೇಶನುಗಳಿಗೆ ಸಂಬಂಧಿಸಿದ ಶ್ರೀಮಂತಿಕೆಗೆ ಕೀರ್ತಿಯನ್ನು ಗಳಿಸಿರುವ ಹೆಸರುಗಳೆಲ್ಲಾ ಸೋಮವಾರಪೇಟೆ ಕಡೆಯವು.

ಮಾಜಿ ಮಂತ್ರಿ ಮಲ್ಲಪ್ಪನವರ ೫೦ ಎಕರೆ ಭೂಮಿ

ಕೊಡಗಿನ ಮಾಜಿ ಮಂತ್ರಿ ಮಲ್ಲಪ್ಪನವರು ಮಾಜಿ ಕೊಡಗು ರಾಜ್ಯದ ಮಂತ್ರಿಯಾಗಿದ್ದಾಗ, ರಾಜರ ಕಾಲದಿಂದ ಐಗೂರು ಗ್ರಾಮಸ್ಥರ ಉಪಯೋಗಕ್ಕೆಂದು ಕಾದಿರಿಸಿದ "ಊರುದುವೆ"ಯಿಂದ ಅತೀ ಫಲವತ್ತಾದ 50 ಎಕರೆಯನ್ನು ಗಿಟ್ಟಿಸಿಕೊಂಡು ಕಾಫಿ ವ್ಯವಸಾಯಕ್ಕೆ ತೊಡಗಿರುವರು. ಹೀಗೆ ದುರ್ಮಾರ್ಗದಿಂದ ಜಾಗವನ್ನುಪಡೆದ ಕಾಂಗ್ರೆಸ್ಸಿಗ ಮಲ್ಲಪ್ಪನವರು, ಜತ್ತಿ ಸಮಿತಿಯವರು, 1956ರಿಂದ ತೊಡಗಿದ ಪ್ಲಾಂಟೇಶನುಗಳಿಗೂ ಪರಮಾವಧಿ ಮಿತಿ ಅನ್ವಯಿಸತಕ್ಕದ್ದು ಎಂದು ಸಲಹೆಮಾಡಿದ್ದನ್ನುನೋಡಿ, ಸಿಟ್ಟುಗೊಂಡು ಭೂಮಾಲಿಕರ ಮುಂದಾಳುತ್ವವನ್ನು ವಹಿಸಿ, ಜತ್ತಿಸಮಿತಿಯ ಶಿಫಾರಸುಗಳನ್ನು ತಿರಸ್ಕರಿಸಿ, ಭೂಸುಧಾರಣೆಯನ್ನು ಈಗ ಜಾರಿಯಲ್ಲಿ ತರಕೂಡದೆಂಬ ಚಳವಳವನ್ನಾರಂಭಿಸಿರುವರು.

ನೀತಿಗೆಟ್ಟ ಸರ್ಕಾರೀ ನೌಕರರು !

ಸೋಮವಾರಪೇಟೆಯ ತೋಟದ ಮಜೂರರ ಮತ್ತು ಹಳ್ಳಿಯ ಇತರ ಬಡವರ ಮೇಲೆ ನಡೆಯುವ ಹಿಂಸೆ ಮತ್ತು ದಬ್ಬಾಳಿಕೆ ಬೇರೆಲ್ಲೂ ನಡೆಯುತ್ತಿಲ್ಲ. ಇಲ್ಲಿನ ಒಬ್ಬ ಸಾಮಾನ್ಯ ಪೋಲೀಸಿನವ ಮತ್ತು ರೆವಿನ್ಯೂ ಇಲಾಖೆಯ ಗುಮಾಸ್ತ ಡೆಪ್ಯೂಟಿ ಕಮಿಷನರಿಗಿಂತ ಮೀರಿದ ದರ್ಪದಲ್ಲಿ ಮೆರೆಯುತ್ತಾರೆ. ಪ್ಲಾಂಟರುಗಳು, ಇಲ್ಲಿನ ಸರಕಾರಿ ನೌಕರರನ್ನೆಲ್ಲಾ ಯೋಗ್ಯವಾಗಿ ಸನ್ಮಾನಿಸುತ್ತಾ, ಮಜೂರರ ಶೋಷಣೆ ಮತ್ತು ದಬ್ಬಾಳಿಕೆಯನ್ನು ನಿರ್ಭಯವಾಗಿ ಮುಂದುವರಿಸುತ್ತಿದ್ದಾರೆ. ಇಲ್ಲಿರುವ ಲೇಬರ್ ಇಲಾಖೆಯ ಫೀಲ್ಡ್ ಅಸಿಸ್ಟೆಂಟ್ ಎಂಬ ಉದ್ಯೋಗಸ್ಥರಿಗೆ ತುಂಬಾ ಆತಿಥ್ಯವನ್ನು ಸಲ್ಲಿಸಿ, ಅವರನ್ನು ಸಹ ಪ್ಲಾಂಟರುಗಳು ಬಗಲಿಗೆ ಹಾಕಿಕೊಂಡಿರುವರೆಂಬ ಆಪಾದನೆಯನ್ನು ಮಜೂರರು ಮಾಡುತ್ತಿರುವರು. ಈ ನೌಕರರು ತೋಟಗಳಿಗೆ ಹೋದಾಗ, ಲೇಬರ್ ಕಾಯಿದೆಗಳನ್ನು ಪ್ಲಾಂಟರುಗಳು ಆಚರಣೆಯಲ್ಲಿ ತಂದಿರುವರೋ ಎಂಬುದನ್ನು ಪರಿಶೀಲಿಸದೆ, ಮಾಲೀಕರ, ಯಾ ಮ್ಯಾನೇಜರುಗಳ ಬಂಗಲೆಯಲ್ಲಿ ಅತಿಥಿಗಳಾಗಿದ್ದುಕೊಂಡು, ಹಸನ್ಮುಖಿಗಳಾಗಿ ಹಿಂತಿರುಗಿದ ನಂತರ, ಆ ತೋಟಗಳ ಮಜೂರರ ಮೇಲೆ ನಡೆಯುವ ಅನಾಚಾರಗಳು ಹೆಚ್ಚುತ್ತಿರುವುದು ಸೋಮವಾರಪೇಟೆ ಕಡೆಯ ಒಂದು ವೈಶಿಷ್ಟ್ಯ.

ಲಲಿತಾದ್ರಿ ತೋಟದ ವಿಸ್ತೀರ್ಣ ?

50 ಎಕರೆ ಮತ್ತದಕ್ಕಿಂತ ಹೆಚ್ಚು ವಿಸ್ತೀರ್ಣವಿರುವ ತೋಟಗಳಲ್ಲಿ ದಿನ ಕೂಲಿ ರೂ. 1—50 ನ. ಪೈಸೆಯೆಂದೂ ಮತ್ತು 49 ಎಕರೆಗಳಿಗಿಂತ ಕಡಿಮೆ ವಿಸ್ತೀರ್ಣವಿರುವ ತೋಟಗಳಲ್ಲಿ ದಿನ ಕೂಲಿ ರೂ. 1-35 ನ. ಪೈ. ಯೆಂದೂ ನಿಶ್ಚಯಿಸಿರುವುದರಿಂದ, 50 ಎಕರೆಗಳಿಗಿಂತ ಎಷ್ಟೋ ಹೆಚ್ಚು ವಿಸ್ತೀರ್ಣವಿರುವ ತೋಟಗಳು ಸಹ, ಕಡಿಮೆ ವಿಸ್ತೀರ್ಣವೆಂದು ಸುಳ್ಳು ಲೆಕ್ಕ ಕೊಟ್ಟು ಮಜೂರರಿಗೆ ಕಡಿಮೆ ದರದ ವೇತನ ಸಿಗುವಂತಾಗಲು ಇಲ್ಲಿನ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಪ್ಲಾಂಟರುಗಳಿಗೆ ಸಹಾಯ ಮಾಡುತ್ತಿರುವರು. ಶ್ರೀ ಮಂಡೇಟಿ ಅಪ್ಪಯ್ಯನವರಿಗೆ ಸೇರಿದ ಲಲಿತಾದ್ರಿ ಎಸ್ಟೇಟ್ ಭತ್ತದ ಗದ್ದೆ, ಕಾಫಿ, ಯಾಲಕ್ಕಿ, ಕಿತ್ತಳೆಯೆಲ್ಲಾ ಸೇರಿ 150 ಎಕರೆಗಿಂತ ಹೆಚ್ಚು ವಿಸ್ತೀರ್ಣವಿದೆ. 70 ಎಕರೆಗಿಂತ ಹೆಚ್ಚು ಸ್ಥಳದಲ್ಲಿ ಕಾಫಿ ತೋಟವಿದ್ದರೂ, ಬರೆ 48½ ಎಕರೆಯಷ್ಟು ಮಾತ್ರ ಕಾಫಿ ತೋಟವಿದೆಯೆಂದು, ಸೋಮವಾರಪೇಟೆ ರೆವಿನ್ಯೂ ಅಧಿಕಾರಿ ಸರ್ಟಿಫಿಕೇಟು ಕೊಟ್ಟು, ಆ ತೋಟದ ಮಜೂರರಿಗೆ ಕಡಿಮೆ ದರದ ವೇತನ ಸಿಗುವಂತೆ ಮಾಡಲಾಗಿದೆ. ಈ ವಿಷಯವನ್ನು ಮತ್ತು ವಿಪರೀತವಾಗಿ ಲಂಚಕೋರತನಕ್ಕೆ ಹೆಸರಾದ ಸೋಮವಾರಪೇಟೆಯ ರೆವಿನ್ಯೂ ಇಲಾಖೆಯವರ ದುರ್ವ್ಯಾಪಾರಗಳನ್ನು ಕೊಡಗಿನ ಡೆಪ್ಯುಟಿ ಕಮಿಷನರವರು ಕೂಡಲೇ ವಿಚಾರಣೆ ನಡೆಸಿ ಸರಿಪಡಿಸತಕ್ಕದ್ದು.

ತೋಟಗಳಲ್ಲಿ ಬೆಳಿಗ್ಗೆ ೬ರಿಂದ ಸಂಜೆ ೬ರವರೆಗೆ ಕೆಲಸ

ದಿನವಕ್ಕೆ 8 ಗಂಟೆ ಕೆಲಸ ಮತ್ತು ಬೆಳಿಗ್ಗೆ 8 ಗಂಟೆಗೆ ಕೆಲಸವನ್ನಾರಂಭಿಸಬೇಕೆಂಬ ಕಾನೂನು ಜಾರಿಯಾಗಿ ಹಲವು ವರ್ಷಗಳಾಗಿದ್ದರೂ, ಸೋಮವಾರಪೇಟೆ ಕಡೆಯ ಕಾಫಿ ತೋಟಗಳಲ್ಲಿ ಬೆಳಿಗ್ಗೆ 6 ಗಂಟೆಗೆ ಕೆಲಸವನ್ನಾರಂಭಿಸಿ, ಮಧ್ಯಾಹ್ನ ಊಟಕ್ಕೆ ಅರ್ಧ ಗಂಟೆ ವಿರಾಮ ಕೊಟ್ಟು, ಸೂರ್ಯಾಸ್ತಮವಾಗುವ ತನಕ ಕೆಲಸಗಾರರನ್ನು ದುಡಿಸಲಾಗುತ್ತಿದೆ. ಬೆಳಿಗ್ಗೆ 6 ಗಂಟೆಗೆ, ಹಾಜರ್ ಕರೆಯುವ ಸ್ಥಳಕ್ಕೆ ತಲುಪಲು ಒಂದು ಸೆಕೆಂಡ್ ತಡಮಾಡಿ ಹೋಗುವ ಕೆಲಸಗಾರರಿಗೆ ಆ ದಿನ ಕೆಲಸ ಸಿಗುವುದಿಲ್ಲ. ಇಲ್ಲಿನ ತೋಟಗಳ ಸುಪರಿಂಟೆಂಡೆಂಟರುಗಳು ನಡೆಸುತ್ತಿರುವ ಹಿಂಸಾಚಾರ ಮತ್ತು ದಬ್ಬಾಳಿಕೆ ಬಹು ಕ್ರೂರ ರೀತಿಯದು.

ಮಜೂರರು ಜಾಗೃತರಾಗುತ್ತಿರುವರು

ಇಷ್ಟೆಲ್ಲ ಆಗಿದ್ದರೂ ಕಳೆದ ಮಹಾ ಚುನಾವಣೆಯಲ್ಲಿ ಪ್ರಥಮವಾಗಿ ಕಮ್ಯೂನಿಸ್ಟ್ ಪಾರ್ಟಿಯ ಪರಿಚಯವಾದ ಇಲ್ಲಿನಮಜೂರರು ಜಾಗೃತರಾಗುತ್ತಿರುವರು. ವಾಟರ್ ಫಾಲ್ ಕಂಪೆನಿಯ ಕೆಲಸಗಾರರು ಯೂನಿಯನ್ ಮೂಲಕ ಬೋನಸ್ ಪಡೆದಲ್ಲದೆ, ವಿಧದ ಕಿರುಕುಳಗಳಿಂದ ಪಾರಾಗಿರುವರು. ಇದನ್ನು ತಿಳಿದ ಇತರ ತೋಟಗಳ ಮಜೂರರು, ಹೆದರಿ ಜೀವನ ಸಾಗಿಸುತ್ತಿರುವ ಸ್ಥಿತಿಯಿಂದ ಮೆಲ್ಲಮೆಲ್ಲನೆ ಬಿಡುಗಡೆಯನ್ನು ಪಡೆಯುತ್ತಿರುವರು. ಸೋಮವಾರಪೇಟೆ ಮತ್ತು ಐಗೂರುಗಳಲ್ಲಿ "ಕೊಡಗು ಜಿಲ್ಲಾ ತೋಟ ಕೆಲಸಗಾರರ ಯೂನಿಯನ್" ಆಫೀಸುಗಳು ತೆರೆಯಲ್ಪಟ್ಟು ತೋಟ ಕೆಲಸಗಾರರ ಸಂಘಟನೆ ಮತ್ತು ಅಭಿವೃದ್ಧಿಗಾಗಿ ದುಡಿಯುತ್ತಿವೆ. ಪ್ಲಾಂಟರುಗಳ ರಾಜ್ಯ ಇನ್ನು ಮುಂದೆ ಸೋಮವಾರಪೇಟೆಯಲ್ಲಿ ನಡೆಯಲಾರದೆಂದು ತಿಳಿದಾದರೂ ಪ್ಲಾಂಟರುಗಳು ದಬ್ಬಾಳಿಕೆ ನಿಲ್ಲಿಸುವುದು ಸೂಕ್ತ. ಅಲ್ಲದೆ ಕಾರ್ಮಿಕರ ಹಿತರಕ್ಷಣೆಯ ಕಾನೂನನ್ನು, ಜ್ಯಾರಿ ಮಾಡುವ ಬದಲು ಮುರಿಯುವ ಈ ಪ್ಲಾಂಟರುಗಳ ವರ್ತನೆಯನ್ನು ನಮ್ಮ ಸರಕಾರದ ಕಾರ್ಮಿಕ ಇಲಾಖೆ ವಿಚಾರಿಸುವುದು ಅತ್ಯಗತ್ಯವಾಗಿದೆ.

ಸೋಮವಾರಪೇಟೆ ಆಸ್ಪತ್ರೆಯಲ್ಲಿ ಅವ್ಯವಸ್ಥೆ ಅಳತೆ ಮೀರಿದೆ

ಕೊಡಗಿನ ದಿನಪತ್ರಿಕೆಯಾದ "ಶಕ್ತಿ" ಯಲ್ಲಿ ಹಲವಾರು ಬಾರಿ, ಸೋಮವಾರಪೇಟೆ ಆಸ್ಪತ್ರೆಯಲ್ಲಿ ನಡೆಯುತ್ತಿರುವ ಅವ್ಯವಸ್ಥೆ ಹಾಗೂ ಅಕ್ರಮಗಳ ಬಗ್ಗೆ ವರದಿ ಬಂದಿತ್ತು. ಆದರೂ ಇಷ್ಟರವರೆಗೆ ಈ ಅಕ್ರಮಗಳ ವಿಚಾರಣೆಯಾಗಿದ್ದಿಲ್ಲ. ಈ ಆಸ್ಪತ್ರೆಯ ಮೇಟ್ರನ್ ಜಾನಕಿಯವರ ಅಧಿಕಾರದ ದುರುಪಯೋಗ ಹಾಗೂ ಇಲ್ಲಿನ ಸೂಪರಿಂಟೆಂಟರ ನಿರ್ಲಕ್ಷ್ಯ ಧೋರಣೆ ದಂಗುಬಡಿಸುವಂತಹದಾಗಿದೆ; ಆದರೂ ಡಿ. ಎಮ್. ಓ.ರವರು ಈ ಬಗ್ಗೆ ಏನೊಂದೂ ವಿಚಾರಣೆ ನಡೆಸದೆ, ಪತ್ರಿಕೆಗಳ ಹಾಗೂ ಜನತೆಯ ಪ್ರತಿಭಟನೆಗಳನ್ನು ಕಿವಿಗೆ ಹಾಕಿಕೊಳ್ಳದೆ ವರ್ತಿಸುತ್ತಿರುವುದು ಅವರ ಜವಾಬುದಾರಿಯುತ ಅಧಿಕಾರ ಸ್ಥಾನಕ್ಕೆ ಶೋಭನೀಯವಾದುದಲ್ಲ. ಡಿ. ಎಮ್. ಓ.ರ ಈ ಮೌನ ಆಸ್ಪತ್ರೆಯ ಅಧಿಕಾರಿಗಳಲ್ಲಿ ಪರೋಕ್ಷವಾಗಿ ಇನ್ನಷ್ಟು ಹೆಚ್ಚಿನ ಉಚ್ಛೃಂಖಲತೆ ಮತ್ತು ಉಪೇಕ್ಷೆಗೆ ಎಡೆಮಾಡಿ ಕೊಟ್ಟಿದೆ. ಆಸ್ಪತ್ರೆಯ ದೈನಂದಿನ ಜೀವನದಲ್ಲಿ ನಡೆಯುವ ಕೆಲವು ಅಕ್ರಮಗಳ ನಿದರ್ಶನಗಳನ್ನು ನಾವಿಲ್ಲಿ ಕೊಟ್ಟಿದ್ದೇವೆ. ಇದನ್ನು ಗಮನಿಸಿ ಈ ಕೂಡಲೇ ಡಿ. ಎಮ್. ಓ.ರವರು ಈ ಬಗ್ಗೆ ನ್ಯಾಯೋಚಿತ ಕ್ರಮಗಳನ್ನು ತೆಗೆದುಕೊಳ್ಳುವರೆಂದು ನಂಬಲೇ?

ಆಸ್ಪತ್ರೆಯ ವ್ಯಾನ್ ಸಂಚಾಲಕನು ನರ್ಸ್ ಅಕ್ಕಮ್ಮ ಅವರಿಗೆ ಹೊಡೆದಿದ್ದಾನೆ. ಈ ಸಂಗತಿ ಡಿ. ಎಮ್. ಓ.ರಿಗೆ ತಿಳಿಸಲಾಗಿದೆ. ಆದರೆ ಡಿ. ಎಮ್. ಓ. ತಣ್ಣಗೆ ಕುಳಿತ ಪರಿಣಾಮವಾಗಿ ನಿಸ್ಸಹಾಯಳಾದ ಅಕ್ಕಮ್ಮ ವಿಷಪಾನ ಮಾಡಿದ್ದಾಳೆಂದು ತಿಳಿದುಬಂದಿದೆ. ಇದರ ಬಗ್ಗೆಯಾದರೂ ವಿಚಾರಣೆ ನಡೆದು ವಿಷಪಾನಕ್ಕೆ ಕಾರಣವೇನೆಂದು ತಿಳಿಯಪಡಿಸಿಲ್ಲ. ಬದಲು ಅಕ್ಕಮ್ಮನ ಮೇಲೆ ಕೇಸು ಚಲಾಯಿಸಲಾಗಿದೆ. ಅನ್ಯ ಹೆಂಗಸನ್ನು ಹೊಡೆಯುವಷ್ಟು ಅನಾಗರಿಕ ಡ್ರೈವರನ ವಿಚಾರಣೆಯಾಗಬೇಕು. ಇಲ್ಲವಾದಲ್ಲಿ ಡಿ. ಎಮ್. ಓ.ರೂ ಕೂಡಾ ಈ ಎಲ್ಲಾ ಅನಾವಸ್ಥೆಯಲ್ಲಿ ಪಾಲುಗಾರರೇ ಎಂಬ ಸಂಶಯ ನಂಬಿಗೆಯಲ್ಲಿ ಪರಿಣಮಿಸೀತು!

ಎರಡನೆಯದಾಗಿ ಆಸ್ಪತ್ರೆಯಲ್ಲಿ ವಾರ್ಡಿನ ಕೆಲಸ ಮಾಡಿಕೊಂಡಿದ್ದ ಗಂಗಮ್ಮ ಎಂಬ ಹೆಣ್ಣು ಗರ್ಭಪತನ

ಕೊಡಗು ಸಮಾಚಾರ

ಮಾಡಿದ್ದು, ಗರ್ಭಿಣಿಯೆಂದು ಮೊದಲೇ ಆಸ್ಪತ್ರೆಯಲ್ಲಿ ತಿಳಿದಿದ್ದು, ತಕ್ಕ ಸೂಚನೆಗಳನ್ನವಳಿಗೆ ಈಯಲಾಗಿದ್ದರೂ, 6½ ತಿಂಗಳ ಗರ್ಭಿಣಿಯಾಗಿದ್ದಾಗ ಇವಳು ಗರ್ಭನಿರೋಧ ಮದ್ದನ್ನು ನುಂಗಿದುದು ಯಾರ ಸಲಹೆ ಅಥವಾ ಒತ್ತಾಯದ ಫಲ? ಈ ಬಡ ಹೆಂಗಸನ್ನು ಮೇಟ್ರನ್ ಜಾನಕಿಯವರು ಕೆಲಸದಿಂದ ತೆಗೆದು ಹಾಕಿದ್ದೇಕೆ? ಮತ್ತೆ ಚಾರ್ಟಿನಲ್ಲಿ 'ಇನ್‌ಫ್ಲುವೆಂಜಾ' ಕಾಯಿಲೆಯ ರೋಗಿ ಇವಳೆಂದು ಸುಳ್ಳು ಬರೆದದ್ದೇಕೆ? ಇಂಥವರು ಮೇಟ್ರನ್ ಅಧಿಕಾರ ಸ್ಥಾನದಲ್ಲಿರಬಹುದೆ?

ಇಷ್ಟೇ ಅಲ್ಲ, ಈಯಮ್ಮ ಮೇಟ್ರನ್ ಆದಂದಿನಿಂದ ಸುಮಾರು ಮೂರು ವರುಷದ ಅವಧಿಯಲ್ಲಿ ಮೂವತ್ತು ನರ್ಸುಗಳನ್ನು ವಿನಾಕಾರಣವಾಗಿ, ತನಗೆ ಅಧೀನರಾಗಿ ಹೇಳಿದಂತೆ ಕುಣಿಯುವುದಿಲ್ಲವೆಂದು ವರ್ಗಾಯಿಸಿದ್ದಾರೆ. ಮನೆ-ಮಕ್ಕಳಿರುವ ಈ ನರ್ಸುಗಳಿಗೆ ಮಾರಿಯಾಗಿರುವ ಈ ಮೇಟ್ರನ್ನನ್ನು ಹಿಂದೊಮ್ಮೆ ವರ್ಗಾಯಿಸಿದರೂ, ಬೆಂಗಳೂರಿನಲ್ಲಿ ಪ್ರಭಾವ ಬೀರಿ ಅಲ್ಲೇ ಇವರು ಉಳಕೊಂಡಿದ್ದಾರೆ! ಮತ್ತೆ ಈಯಮ್ಮನಿಗೆ ಆಗದವರನ್ನೆಲ್ಲಾ ರಾತ್ರಿ ಡ್ಯೂಟಿಗೆ ಮನಬಂದಂತೆ ಹಾಕುವುದು, ರಜಾ ಕೊಡದಿರುವುದು ಸದಾ ನಡೆಯುತ್ತಿರುವ ಸಂಪ್ರದಾಯ.

ಈ ಸರ್ವಾಧಿಕಾರಿ ಮೇಟ್ರನ್‌ರವರು ಗ್ರಾಮಸ್ಥರು ಲೇಡಿಡಾಕ್ಟರನ್ನು ಕರೆಯಬಂದರೆ ಕಳಿಸಿಕೊಡುವುದಿಲ್ಲ. ಇವರು ದಿನಾ ಕಚ್ಚಾಟ ನಡೆಸುವುದರಿಂದಾಗಿ ರೋಗಿಗಳ ಆರೈಕೆಗೆ ಸೊನ್ನೆಯಾಗಿದೆ.

ಈ ಎಲ್ಲಾ ವಿಷಯಗಳ ಕೂಲಂಕುಷ ವರದಿ "ಶಕ್ತಿ"ಪತ್ರಿಕೆಯಲ್ಲಿ ಬಂದ ಪರಿಣಾಮವಾಗಿ, ಈ ಪತ್ರಿಕೆಯನ್ನು ಆಸ್ಪತ್ರೆಯೊಳಗೆ ಯಾರೂ ತರಬಾರದೆಂದು ಈಯಮ್ಮನವರು ಆಜ್ಞೆ ಇತ್ತಿದ್ದಾರಂತೆ, ಇಷ್ಟೆಲ್ಲಾ ಅಕ್ರಮಗಳ ನಡೆಸಿದ ಮತ್ತು ಪತ್ರಿಕೆ ಓದುವ ಸ್ವಾತಂತ್ರ್ಯಕ್ಕೂ ಕಲ್ಲು ಹಾಕುವ ಈ ಮೇಟ್ರನ್ನನ್ನು ಸೋಮವಾರಪೇಟೆ ಆಸ್ಪತ್ರೆಯಲ್ಲಿ ಹೆಚ್ಚು ಸಮಯ ಉಳಿಸಿಕೊಳ್ಳುವುದು, ಡಿ. ಎಮ್. ಓ.ರವರ ಯೋಗ್ಯತೆಯನ್ನು ಬಹಳವಾಗಿ ಕಮ್ಮಿಯಾಗಿಸುತ್ತದೆ. ಇನ್ನು ಪತ್ರಿಕಾ ಪ್ರತಿನಿಧಿಗಳಿಗೆ ಏನೊಂದು ಸುದ್ದಿ-ಸಮಾಚಾರ ತಿಳಿಸಲು ಮೇಟ್ರನ್ ನಿರಾಕರಿಸಿದ್ದಾರೆ. ಈ ಎಲ್ಲದರ ವಿಚಾರಣೆ ತಕ್ಷಣ ನಡೆಯಬೇಕು; ಡಿ. ಎಮ್. ಓ.ರವರು ಕೂಡಲೇ ಈ ದಿಶೆಯಲ್ಲಿ ಸೂಕ್ತ ಹೆಜ್ಜೆಗಳನ್ನು ಮುಂದಿಡಬೇಕು. ಅಲ್ಲದೆ ಸಂಬಂಧಪಟ್ಟ ಮಂತ್ರಿವರ್ಯರೂ ಇದನ್ನು ಗಮನದಲ್ಲಿಟ್ಟು ತಕ್ಕ ಕ್ರಮ ಕೈಗೊಳ್ಳುವಂತಾಗಲಿ.

ಇದೊಂದು ಮುನ್ನೆಚ್ಚರಿಕೆಯಾಗಲಿ

ಈ ಹಿಂದೆ 'ಜನಶಕ್ತಿ' ಯಲ್ಲಿ ನಿರಪರಾಧಿಯಾದ ಶೀನಶೆಟ್ಟಿಯ ಮೇಲೆ ಇಲ್ಲದ ಅಪಾದನೆ ಹೊರಿಸಿ ಪೋಲೀಸರು ಹೊಡೆದು ದೌರ್ಜನ್ಯವೆಸಗಿದ ಬಗ್ಗೆ ವರದಿಯಾ

(೯ನೇ ಪುಟ ನೋಡಿ)

ಅಮೆರಿಕಾದ ಶ್ರೇಷ್ಠ ನೀಗ್ರೋ ಹಾಡುಗಾರ ಸ್ವಾತಂತ್ರ್ಯಪ್ರಿಯ

★

ಪಾಲ್ ರೋಬ್ಸನ್

ಪಾಲ್ ರೋಬ್ಸನ್ — ಅಮೆರಿಕಾದ ಅತ್ಯಂತ ಶ್ರೇಷ್ಠ ವಿಶ್ವವಿಖ್ಯಾತ ಹಾಡುಗಾರನೇ ಮಾತ್ರವಲ್ಲ, ಆತ ಸ್ವಾತಂತ್ರ್ಯ ಹೋರಾಟಗಾರ. ಆತನ ಹಾಡು ಸ್ವಾತಂತ್ರ್ಯಕ್ಕಾಗಿ ತಡಪಡಿಸುತ್ತಿರುವ ಅಮೆರಿಕಾದ ಲಕ್ಷಾಂತರ ಮಂದಿ ನೀಗ್ರೋ ಜನತೆಯ, ಅದುಮಿ ಹಿಡಿಯಲ್ಪಟ್ಟ, ನೆರೆಯಂತೆ ಉಕ್ಕಿ ಹರಿಯಲು ಯತ್ನಿಸುತ್ತಿರುವ ಪ್ರಚಂಡ ಬಯಕೆಯ ಮೂರ್ತ ರೂಪ ಮಾತ್ರ. ಆತ ಹಾಡುವುದು ಸ್ವಾತಂತ್ರ್ಯದ ಹಾಡುಗಳನ್ನು. ಆತ ಹಾಡುತ್ತಿಲ್ಲ; ಗರ್ಜಿಸುತ್ತಾನೆ. ಆತ ಸ್ವಾತಂತ್ರ್ಯಕ್ಕಾಗಿ ಬಿಳಿಯರನ್ನು ಬೇಡುತ್ತಿಲ್ಲ—ಹೋರಾಡುತ್ತಾನೆ.

ವಿದ್ವತ್ತು, ಗರ್ವ ಮತ್ತು ನಿಶ್ಚಲ ಮನಸ್ಸುಳ್ಳ ಭೀಮಕಾಯದ ರೋಬ್ಸನ್ ಶೀತಲ ಯುದ್ಧ ಮತ್ತು ಬಿಳಿಯರ ವರ್ಣಭೇದಕ್ಕೆ ಸಿಲುಕಿದ ಅತ್ಯಂತ ದೊಡ್ಡ ಬಲಿ. ರೋಬ್ಸನನು ತನ್ನ ಮಹತ್ಪೂರ್ಣ ಜೀವನದ ತುಟ್ಟತುದಿಯನ್ನು ಮುಟ್ಟಿದಾಗ ಅಮೆರಿಕಾದ ಬಿಳಿ ಧನಿಗಳ ಮತ್ತು ರಾಜಕೀಯ ನಾಯಕರ ಸಮ್ಮಿಳಿತ ಕಾರಸ್ಥಾನಕ್ಕೆ ಸಿಕ್ಕಿದ್ದಕ್ಕಾಗಿ ಕೆಳಕ್ಕೆ ತಳ್ಳಲ್ಪಟ್ಟನು.

ಈ ಶ್ರೇಷ್ಟ ಕಲಾವಿದನನ್ನು ರಹಸ್ಯವಾಗಿ ವಿಚಾರಣೆಗೆ ಗುರಿಪಡಿಸಿ, ಅಮೆರಿಕಾದ ಮೆಕಾರ್ಥಿಸ್ಟ್ ಸ್ಟೇಟ್ ಇಲಾಖೆ ಹೇಗೆ ಸೆರೆರಾಗಾರಕ್ಕೆ ತಳ್ಳಿತು; ರಾಬ್ಸನ ಮಾತಿನಲ್ಲೇ ಹೇಳೋದಿದ್ದರೆ, ಈ ಸ್ಟೇಟ್ ಇಲಾಖೆ ಬೆಳೆಯುತ್ತಿರುವ ಕಪ್ಪು ಶಕ್ತಿಗೆ ಎಷ್ಟೊಂದು ಹೆದರುತ್ತಾರೆ; ಹಾಗೂ ಬಿಳಿಯರ ಪ್ರಭುತ್ವದ ವಿರುದ್ಧ ರೋಬ್ಸನನಂಥಾ ನೀಗ್ರೋ ನಾಯಕರು ಯಾವ ರೀತಿಯಲ್ಲಿ ಹೋರಾಡುತ್ತಿದ್ದಾರೆಂಬುದನ್ನು ಲೇಖಕ ಕಾರ್ಲ್ ಟಿ. ರೋವನ್ ವಿವರವಾಗಿ ಈ ಲೇಖನದಲ್ಲಿತ್ತಿದ್ದಾರೆ:

ರೋಬ್ಸನ್ ಅಂತರ್‍ರಾಷ್ಟ್ರ ಕಮ್ಯೂನಿಸಂನ ಪ್ರಚಾರಕ, ಆತ ಕಮ್ಯೂನಿಸ್ಟನೆಂದೆನ್ನುತ್ತಿದೆ ಸ್ಟೇಟ್ ಇಲಾಖೆ. ಈ ಇಲಾಖೆಯೊಂದಿಗೆ ಆತ ನಡೆಸುವ ಹೋರಾಟದಲ್ಲಿ ನೀಗ್ರೋ ಸಮಾನತೆಯ ಪ್ರಶ್ನೆ ಅಡಗಿಹೋಗಿದೆಯೆಂದು ರೋಬ್ಸನ್ ಆಪಾದಿಸಿದ್ದಾನೆ. ನ್ಯಾಯಾಂಗ ಮತ್ತು ಶಾಸನಾಂಗಗಳ ಮೂಲಕ ಸ್ವಾತಂತ್ರ್ಯ ದಕ್ಕಬಹುದೇ ಎಂದು ವಿವೇಚನೆಯುಳ್ಳ ಅಧಿಕಾಧಿಕ ನೀಗ್ರೋಗಳು ತಮ್ಮತಮ್ಮಲ್ಲೇ ಪ್ರಶ್ನಿಸುತ್ತಿರುವ ಈ ಸಂದರ್ಭದಲ್ಲಿ ರೋಬ್ಸನನ ಮೇಲಿನ ಆಪಾದನೆಯನ್ನು ಕೂಲಂಕುಶವಾಗಿ ಪರಿಶೀಲಿಸಬೇಕಾಗಿದೆ. ಅದುದರಿಂದ, ರೋಬ್ಸನ್ ನೀಗ್ರೋಗಳಿಗಾಗಿ ಹೋರಾಡುತ್ತಿದ್ದಾನೆಯೇ ಅಥವಾ ನೀಗ್ರೋಗಳನ್ನು ಅಂತರ್‍ರಾಷ್ಟ್ರೀಯ ರಾಜಕೀಯ ರಂಗದಲ್ಲಿ ಉಪಯೋಗಿಸುತ್ತಿದ್ದಾನೆಯೋ ಎಂಬುದನ್ನು ತೀರ್ಮಾನಿಸಬೇಕಾದ ಘೋರವಾದ ಜವಾಬುದಾರಿ ಪ್ರತಿಯೊಬ್ಬ ನೀಗ್ರೋವಿನ ಮೇಲಿದೆ.

ಸ್ಟೇಟ್ ಇಲಾಖೆಗೆ ಮಾತ್ರವಲ್ಲ ವಾಷಿಂಗ್ಟನ್ನಿನ ಅಧಿಕ ಜನರಿಗೆ, ವರ್ಣಶ್ರೇಷ್ಠತೆಯ ಮೇಲಿನ ರೋಬ್ಸನನ ಅಥವಾ ಇತರ ನೀಗ್ರೋ ಹೋರಾಟಗಾರರ ಅಭಿಪ್ರಾಯ ರುಚಿಸುವುದಿಲ್ಲ. ಆದರೂ ಫೆಡರಲ್ ಕೋರ್ಟಿಗಿತ್ತ, ನನಗೂ ಇತ್ತ ವರದಿಯಲ್ಲಿ ಸ್ಟೇಟ್ ಇಲಾಖೆ ರೋಬ್ಸನನನ್ನು ಅಂತರ್‍ರಾಷ್ಟ್ರೀಯ ಕಮ್ಯೂನಿಸ್ಟ್ ಪ್ರಚಾರಕನೆಂದು ಆಪಾದಿಸಿದೆ.

ಈ ಸಂದರ್ಭದಲ್ಲಿ ರೋಬ್ಸನ್ ಅನ್ನುತ್ತಾನೆ: “ನನ್ನನ್ನು ಆಶ್ಚರ್ಯಪಡಿಸುವ ವಿಷಯವಿಷ್ಟೆ, ನೀಗ್ರೋಗಳು ನನ್ನ ಮಾತಿನ ಮುಂದೆ ಜೇಮ್ಸ್ ಈಸ್ಟ್‌ಲೇಂಡ್ (ಸ್ಟೇಟ್ ಇಲಾಖೆ) ಮತ್ತವನ ಗುಂಪಿನ ಮಾತನ್ನು, ಕೇಳುತ್ತಾರಲ್ಲವೆಂದು ? ತನ್ನನ್ನು ಸಂಪೂರ್ಣ ನಾಶ ಮಾಡಲು ಇದೆಲ್ಲಾ ಜೇಮ್ಸ್ ಈಸ್ಟ್‌ಲೇಂಡ್ ಮತ್ತು ಬಿಳಿಯರ ಹಂಚಿಕೆಯೆಂದು ರೋಬ್ಸನ್ ಅನ್ನುತ್ತಾನೆ. ಅಮೆರಿಕಾದ ಮೇಲೆ ಜೇಮ್ಸ್ ಈಸ್ಟ್ ಲ್ಯಾಂಡ್ ಮತ್ತು ಆತನ ಗುಂಪು ಎಷ್ಟೊಂದು ದೊಡ್ಡ ದುರಂತದಾಯೀ ಶಾಪವಾಗಿದೆಯೆಂದು ಇದರಿಂದ ಇನ್ನೊಮ್ಮೆ ಸ್ಪಷ್ಟವಾಗುತ್ತದೆ.

ರೋಬ್ಸನ್ ಕಮ್ಯೂನಿಸ್ಟನೇ ? ಆತ ನೀಗ್ರೋಗಳ ಪರವಾಗಿ ಕೆಲಸ ಮಾಡುತ್ತಿರುವಾಗ ‘ಕೆಂಪು ಕಾಮ್ರೇಡು’ಗಳಿಗಾಗಿ ದುಡಿಯುತ್ತಿದ್ದಾನೆಯೇ ? ಹಾರ್ದಿಕವಾಗಿ ಆತ ನೀಗ್ರೋಗಳಿಗಾಗಿ ದುಡಿಯುವುದೇ ಅಥವಾ ಅಂತರ್‍ರಾಷ್ಟ್ರೀಯವಾಗಿ ಪಿತೂರಿಯ ಅಂಗವಾಗಿ ರೋಬ್ಸನ್ ಕಾರ್ಯವೆಸಗುತ್ತಿದ್ದಾನೆಯೇ ಎಂಬ ಪ್ರಶ್ನೆಗಳಿಗೆಲ್ಲಾ ಆತ ಈ ರೀತಿ ಉತ್ತರಿಸುತ್ತಾನೆ: “ನಾನೇನೂ ಅಂತರ್‍ರಾಷ್ಟ್ರೀಯ ಪಿತೂರಿ ಅಂಗವಾಗಿಲ್ಲ, ಇದು ಸ್ಪಷ್ಟ. ನಾನು ಇಷ್ಟರವರೆಗೆ ನುಡಿದ ಮಾತು, ಗೈದ ಕೃತಿ ನೀಗ್ರೋಗಳ ಬಿಡುಗಡೆಯ ಒಂದೇ ಒಂದು ಉದ್ದೇಶವನ್ನು ಸಾಧಿಸುವಂತಹುದಾಗಿದೆ.”

“ಅಧಿಕಾಂಶ ಅಮೆರಿಕನರು ನಿನ್ನನ್ನು ಕಮ್ಯೂನಿಸ್ಟನೆಂದು ಭಾವಿಸುತ್ತಿರುವರಲ್ಲಾ” ಎಂದು ನಾನು ಕೇಳಿದೆ.

ಆಗ ಹೆಚ್ಚಿನ ಅಮೆರಿಕನರು ಮರೆತ ಒಂದು ನಿಜಾಂಶವನ್ನು ರೋಬ್ಸನ್ ಬೆಳಕಿಗೆ ತಂದ.—1946ರಲ್ಲಿ ಕೆಲಿಫೋರ್ನಿಯದಲ್ಲಿ ತಾನು ಕಮ್ಯೂನಿಸ್ಟ್ ಅಲ್ಲ, ಎಂದೂ ಆಗಿಲ್ಲವೆಂಬುದನ್ನು ಆತ ಪ್ರತಿಜ್ಞಾಪೂರ್ವಕವಾಗಿ ನುಡಿದಿದ್ದುದನ್ನು ನನಗೆ ಜ್ಞಾಪಿಸಿದ.

“ಒಂದು ವೇಳೆ ನಾನು ಕಮ್ಯೂನಿಸ್ಟನೆಂದು ಅವರು ಭಾವಿಸಿದ್ದರೆ ಸುಳ್ಳು ಹೇಳಿಕೆಗಾಗಿ, ಅಂದು ನನ್ನನ್ನೇಕೆ ಬಂಧಿಸಲಿಲ್ಲ? ಜೈಲಿನಲ್ಲೇಕೆ ಆವಾಗ ಇಟ್ಟಿಲ್ಲ ? ಯಾಕೆಂದರೆ ಅವರು ನನ್ನ ಮಾತನ್ನಾಗ ನಂಬಿದ್ದರು, ಅಲ್ಲವೇ ?

“ನನ್ನ ವಿರುದ್ಧವಾದ ಒಂದು ಸಾಕ್ಷ್ಯವೆಂದರೆ ಮಾನ್ನಿಂಗ್ ಜೋನ್ಸನ್‌ದು. ನಾನು 1934-35ರಲ್ಲಿ ಪಾರ್ಟಿ ಸದಸ್ಯನಾಗಿದ್ದೆನೆಂದು ಆತ ಸಾಕ್ಷಿ ನುಡಿದಿದ್ದ. ಆಗ ನಾನು ಇಂಗ್ಲೆಂಡಿನಲ್ಲಿದ್ದೆ. ಆದುದರಿಂದ ನನ್ನೊಡನೆ ಯಾವ ‘ಸೆಲ್ಲಿ’ನಲ್ಲಿರಲಿಕ್ಕೂ ಸಾಧ್ಯವಿದ್ದಿಲ್ಲ. ಈ ಜೋನ್ಸನ್ ಎಷ್ಟು ದೊಡ್ಡ ಸುಳ್ಳುಗಾರನಾಗಿದ್ದನೆಂದರೆ, ಸ್ಟೇಟ್ ಇಲಾಖೆ ಸಹಿತ ಆತನನ್ನು ಕಡೆಗೆ ಒಪ್ಪಲಿಲ್ಲ.

ಈಗ ಕಮ್ಯೂನಿಸ್ಟ್ ಪಕ್ಷ ನ್ಯಾಯಬದ್ಧ ಪಕ್ಷವಾಗಿದೆ. ಯಾವುದೇ ರಾಜಕೀಯ ಪಕ್ಷದ ಸದಸ್ಯನಾಗುವ ಇಚ್ಛೆಯಿದ್ದರೆ ನಾನು ಕಮ್ಯೂನಿಸ್ಟ್ ಪಕ್ಷವನ್ನೇ ಸೇರುತ್ತಿದ್ದೆ. ಎಂದೆಂದಿಗೂ ಈ ರಿಪಬ್ಲಿಕನ್ ಮತ್ತು ಡೆಮೊಕ್ರೆಟಿಕ್ ಪಕ್ಷದ ಸಂಪರ್ಕ ಇಟ್ಟುಕೊಳ್ಳಲು ನಾನು ಸಿದ್ಧನಿಲ್ಲ. ಆದರೆ ನಾನು ಕಮ್ಯೂನಿಸ್ಟ್ ಪಕ್ಷದ ಸದಸ್ಯನಾಗಿರಲಿಲ್ಲ, ಇದು ಮಾತ್ರ ನಿಜ.” ಎಂದು ರೋಬ್ಸನ್ ದೃಢವಾಗಿ ನುಡಿದ

ಕ್ಯಾಲಿಫೋರ್ನಿಯದಲ್ಲಿ ಪ್ರತಿಜ್ಞಾಪೂರ್ವಕವಾಗಿ ತಾನು ಕಮ್ಯೂನಿಸ್ಟನಲ್ಲವೆಂದು ಹೇಳಿದೆ. ರೋಬ್ಸನ್ ಒಂದು ವರ್ಷದ ನಂತರ, ಆತ ಕಾಂಗ್ರೆಸ್ ವಿಚಾರಣೆಯ ಮುಂದೆ ಘಟನೆಯ 5ನೇ ತಿದ್ದುಪಡಿ ಉಪಯೋಗಿಸಿ ಉತ್ತಮ ರೀತಿಯಲ್ಲಿ ಉತ್ತರಿಸಲು ತಿರಸ್ಕರಿದ. ಇದಕ್ಕೆ ಕಾರಣವೇನು ಎಂದು ನಾನು ಪ್ರಶ್ನಿಸಿದೆ.

‘‘ಕಾರಣವಿಷ್ಟೆ: ಆಗ ಹಾಲಿವುಡ್‌ನ ಲೇಖಕರು ಜೈಲು ಕಂಡಿದ್ದರು. ಕಮ್ಯೂನಿಸ್ಟ್ ವಿರೋಧದ ಹುಚ್ಚು ಹೊಳೆ ಹರಿದಿತ್ತು. ನಾನು ವಿಚಾರಣೆಗೆ ಒಳಗಾಗಿದ್ದರೆ ಈ ಹುಚ್ಚಿಗೆ ಅಪರೋಕ್ಷ ಬೆಂಬಲವಿತ್ತಂತಾಗುತ್ತಿತ್ತು.

ನನ್ನ ರಾಜಕೀಯ ವಿಶ್ವಾಸ ಇತರರ ವ್ಯವಹಾರವಲ್ಲವೆಂದು ಘಟನೆಯ ಆಧಾರದ ಮೇಲೆ ನಾನು ನುಡಿಯಬೇಕಾಯಿತು. ಅದು ನಡೆದು ಈಗ ಹತ್ತು ವರ್ಷಗಳು ಸಂದಿವೆ. ಈಗಲೂ ನನ್ನ ರಾಜಕೀಯ ಇತರರ ವ್ಯವಹಾರವಲ್ಲ.

ಸೋವಿಯತ್ ಬಗ್ಗೆ, ಅಲ್ಲಿನ ಜನತೆಯ ಬಗ್ಗೆ ರಾಬ್ಸನನ ಅಚಲ ವಿಶ್ವಾಸ ಪ್ರೀತಿಯು ಎಂದಿಗೂ ಕದಲಲ್ಪಡುವಂಥದ್ದಲ್ಲ ಎಂದು ಈ ಕೆಳಗೆ ಆತನೀಯುವ ಅಭಿಪ್ರಾಯಗಳಿಂದ ತಿಳಿಯಬಹುದು.

1947ರಲ್ಲಿ ಅನ್-ಅಮೆರಿಕನ್ ಕಮಿಟಿಯು ರೊಬ್ಸನನ್ನು ಕಮ್ಯೂನಿಸ್ಟ್ ಬೆಂಬಲಿಗರ ಗುಂಪಿನಲ್ಲಿ ಸೇರಿತ್ತು. 1949ರಲ್ಲಿ ಆತನ ಮಗನ ಮದುವೆಯಾದ ನಂತರದಲ್ಲಿ 3,500 ಜನರ ಒಂದು ಸಭೆಯಲ್ಲಿ, ‘ಸೋವಿಯತ್ ಜನತೆಯನ್ನು ಇತರ ಎಲ್ಲಾ ರಾಷ್ಟ್ರಗಳಿಗಿಂತ ಹೆಚ್ಚಾಗಿ ನಾನು ಪ್ರೀತಿಸುತ್ತೇನೆ. ನೀಗ್ರೋ ಜನತೆಗಾಗಿ, ಪುರೋಗಾಮಿ ಜನತೆಗಾಗಿ, ಮುಂಬರುವ ವಿಶ್ವದ ಜನತೆಗಾಗಿ ರಷ್ಯನರು ಸಂಕಷ್ಟಗಳಿಗೆ ತುತ್ತಾಗಿದ್ದಾರೆ, ಬಲಿದಾನವೆಸಗಿದ್ದಾರೆ’ ಎಂದು ಅಂದು ರೋಬ್ಸನನಂದಿದ್ದ ಮಾತನ್ನು ಆತನ ನೆನಪಿಗೆ ತನ್ನಿ. ಆತ ಅದಕ್ಕೀಯುವ ಉತ್ತರವೇನು? ಆತ ಸ್ವಲ್ಪ ಹೊತ್ತು ಯೋಚಿಸುತ್ತಾನೆ. ಏನೇ ಪ್ರವಾದವಾಗಲಿ, ಅದರಿಂದ ತಪ್ಪಿಸಿಕೊಳ್ಳುವುದು ತನಗೆ ಸಾಧ್ಯವೆಂದು ರೋಬ್ಸನನ ಭಾವನೆ. ಹೌದು, ಆತನ ಬೆಂಬಲಕ್ಕೆ ನೀಗ್ರೋ ಸಮೂಹವಿದೆ. ಈ ಪ್ರಚಂಡ ‘ಕಪ್ಪು ಶಕ್ತಿ’ ಡಲ್ಲೆಸ್‌ಗಳು, ಈಸ್ಟ್ ಲ್ಯಾಂಡ್—ನೋಲ್ಯಾಂಡ್‌ಗಳಿಗಿಂತ ಎಷ್ಟೋ ಬಲಾಢ್ಯರು. ಆದರೆ ತಮ್ಮ ಈ ಶಕ್ತಿಯನ್ನು ನೀಗ್ರೋಗಳು ಅರಿತಿದ್ದರೆ! ಈ ಭಾವನೆಯಿದ್ದರೂ ರೋಬ್ಸನ್ ತನ್ನ ರಾಜಕೀಯ ಸಿದ್ಧಾಂತವನ್ನು ವಿವರಿಸುತ್ತಾನೆ.

“ಒಬ್ಬ ನಿಷ್ಠ ಅಮೇರಿಕನನಾಗಿ, ಜೆಫರ್‌ಸನ್ ಫ್ರೆಂಚ್ ಕ್ರಾಂತಿಯನ್ನು ಬೆಂಬಲಿಸಿದಂತೆ, ನಾನು ರಷ್ಯಾ ಮತ್ತು ಚೈನಾದ ಕ್ರಾಂತಿಗಳನ್ನು ಬೆಂಬಲಿಸುತ್ತೇನೆ. ರಷ್ಯದಲ್ಲಿ ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದಿರದಿದ್ದರೆ ಚೈನಾವಾಗಲೀ ಘಾನಾವಾಗಲೀ ಇಂದು ಸ್ವತಂತ್ರವಾಗುತ್ತಿರಲಿಲ್ಲ. ಮೊಂಟ್‌ಗೊಮೆರಿಯ ನೀಗ್ರೋಗಳು ಸ್ವಾತಂತ್ರ್ಯದ ಸನಿಹಕ್ಕೆ ಇಷ್ಟೊಂದು ಹತ್ತಿರವಾಗುತ್ತಿರಲಿಲ್ಲ. ಹಳೆ ಆಡಳಿಯು ಖಂಡಿತವಾಯೂ, ವಸಾಹತುಶಾಹಿಗಳ ಮುಗ್ಗುಲಲ್ಲಿ ನಿಲ್ಲುತಿತ್ತು ಈ ಬಗ್ಗೆ ನನಗೆ ಅಚಲ ವಿಶ್ವಾಸವಿದೆ.

“ಆದಕಾರಣ, ರಾಬ್ಸನ್ ನೀನು ಭೂಮಿಯ ಮೇಲಿಂದ ಕಮ್ಯೂನಿಸ್ಟರನ್ನು ಓಡ್ಡೋಡಿಸು’ ಎಂದು ಈಸ್ಟ್‌ಲ್ಯಾಂಡ್ ನನ್ನನ್ನು ಕೇಳುವಾಗ ನಾನನ್ನುತ್ತೇನೆ ‘ಕಮ್ಯೂನಿಸ್ಟರು ಬಹಳ ಒಳ್ಳೆಯ ಮಂದಿ, ಯಾಕೆಂದರೆ ಅವರು ಈ ಈಸ್ಟ್‌ಲ್ಯಾಂಡ್ ನೊಲ್ಯಾಂಡ್ ಮೇಲೆ ಒತ್ತಡ ಹಾಕುತ್ತಿದ್ದಾರೆ”

“ಇದರಿಂದಾಗಿ ನಾನು ನಿಷ್ಠಾರಹಿತ ಅಮೆಕನ್ ಆಗೋಲ್ಲವೇ? ನಿಷ್ಠೆಯೆಂದರೇನು? ಈ ಬಿಳಿಯರು ದಬ್ಬಾಳಿಕೆಯನ್ನು ಇಚ್ಛೆ ಬಂದಂತೆ ಅವರು ಉಪಯೋಗಿಸಿದಾಗ ನೀಗ್ರೋಗಳು ವಿರೋಧಿಸಿದರೆ ಎಲ್ಲಾ ನೀಗ್ರೋಗಳನ್ನು ಅವರು ಅಮೇರಿಕಾ ದ್ರೋಹಿಗಳೆಂದು ಬಗೆಯುವರೇ ? ಹಾಗೆ ಬಗೆದರೆ ಬಗೆಯಲಿ!”


ರಷ್ಯನರು ರಾಬ್ಸನನ ಮೆದುಳು ತೊಳೆದು ಅದರಲ್ಲಿ ಕಮ್ಯೂನಿಸಮನ್ನು ತುಂಬಿದ್ದರೆಂಬ ಆಪಾದನೆ ಕೇಳಿ ರೋಬ್ಸನ್ ನಗುತ್ತಾನೆ.

‘ನಾನು 1927ರ ಅವಧಿಯ ಲಂಡನಿನಲ್ಲಿದ್ದಾಗ ಅಲ್ಲಿನ ಕಾರ್ಮಿಕರ ಚಳವಳಿಯು ನನಲ್ಲಿ ಈಧೋರಣೆಯನ್ನುಮೂಡಿಸಿತು. 1935ರಲ್ಲಿ ನಾನು ರಷ್ಯಕ್ಕೆ ರಾಜಕಾರಣಿಯಾಗಿದ್ದಿಲ್ಲ, ಕಲಾವಿದನಾಗಿ ತೆರಳಿದ್ದೆ ಅಷ್ಟೆ. ಬ್ರಿಟಿಷ್ ಕಾರ್ಮಿಕರ ಹೋರಾಟ ನೋಡಿದ ನನ್ನ ಸ್ಥಾನ ನೀಗ್ರೋ ಕಾರ್ಮಿಕ ವರ್ಗದಲ್ಲೆಂದು ದೃಢ ನಿರ್ಧಾರ ಕೆಳಿದಿದೆ. ಆದಕಾರಣ ನೀಗ್ರೋ ಬಂಡವಳಿಗರೊಂದಿಗೆ ನನ್ನ ಸಂಪರ್ಕವಿಲ್ಲ. ಈ ಹಿನ್ನೆಲೆಯನ್ನಿಟ್ಟುಕೊಂಡು, ನಾನು ಜಗತ್ತಿನಲ್ಲಿ ಫ್ರಾನ್ಸಿಗಿಂತ ಮೊದಲು ಯಾವಾಗಲೂ ಚೈನಾವನ್ನೇ ಮೆಚ್ಚುತ್ತೇನೆ” ಆತ ಮುಂದುವರಿಯುತ್ತಾ ರಷ್ಯದ ಭೇಟಿ ಬಗ್ಗೆ ಅನ್ನುತ್ತಾನೆ.

1934ರಲ್ಲಿ ರಷ್ಯಕ್ಕೆ ಭೇಟಿಯಿತ್ತಾಗ, ನನ್ನ ಜೀವನದಲ್ಲೇ ಮೊಟ್ಟಮೊದಲು

(ಕೊನೇ ಪುಟ ನೋಡಿ)

ಮಹತ್ವಪೂರ್ಣ ಅಕ್ಟೋಬರ್ ಮಹಾ ಕ್ರಾಂತಿ! ವಿಶ್ವ



ಕ್ರಾಂತಿಪುರುಷ ಲೆನಿನರು ಸೋವಿಯತ್ ವಿದ್ಯಾರ್ಥಿಗಳ ಜತೆಯಲ್ಲಿ

ನಲವತ್ತು ವರುಷಗಳ ಹಿಂದೆ ರಷ್ಯದ ಕಾರ್ಮಿಕರು ಮತ್ತು ರೈತರು ಲೆನಿನರ ನೇತೃತ್ವದಲ್ಲಿದ್ದ ಬೋಲ್ಷೆವಿಕ್ ಪಾರ್ಟಿಯ ನಾಯಕತ್ವದಲ್ಲಿ ಬಂಡವಾಳಶಾಹಿ ಮತ್ತು ಭೂಮಾಲಿಕರನ್ನುರುಳಿಸಿ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡು ಇಡೀ ವಿಶ್ವವನ್ನೇ ಅಚ್ಚರಿಗೊಳಿಸಿದರು. 1917ರ ನವೆಂಬರ 7, ಕ್ರಾಂತಿಯ ಅದ್ಭುತ ದಿಗ್ವಿಜಯವು ಮಾನವ ಜೀವನದಲ್ಲಿ ಹೊಸ ಯುಗವನ್ನಾರಂಭಿಸಿತು, ಸಾಮ್ರಾಜ್ಯಶಾಹಿಯ ಅವನತಿಯನ್ನು ಉದ್ಘಾಟಿಸಿತು. ಮಾರ್ಕ್ಸ್, ಎಂಗೆಲ್ಸ್ ಮತ್ತು ಲೆನಿನರು ಕನಸು ಕಂಡಿದ್ದ ನಿಜವಾದ ಮಾನವ ಸಮಾಜದ ಇತಿಹಾಸ ಅಂದು ಆರಂಭವಾಯಿತು.

ಇದಕ್ಕೆ ಪೂರ್ವದಲ್ಲಿ ಹಲವು ಕ್ರಾಂತಿಗಳಾಗಿದ್ದುವು. ಅವು ಇತಿಹಾಸದಲ್ಲಿ ಮಾರ್ಪಾಡುಗಳನ್ನು ತಂದವು. ಆದರೆ ಈ ಕ್ರಾಂತಿಗಳೆಲ್ಲವೂ, ಅವುಗಳ ಪರಿಣಾಮಗಳೆಲ್ಲವೂ ಸಹ ಒಂದು ಶೋಷಕ ವರ್ಗದಿಂದ ಇನ್ನೊಂದು ಶೋಷಕ ವರ್ಗದ ಕೈಗೆ ಅಧಿಕಾರ ವರ್ಗಾವಣೆಯಾಗುವುದಾಗಿತ್ತು, ಶೋಷಣೆಯ ರೂಪ ಮಾತ್ರ ಬದಲಾಗಿ, ಶೋಷಣೆ ಮಾತ್ರ ಉಳಿಯುತ್ತಿತ್ತು. ಚರಿತ್ರೆಯಲ್ಲಿ ಪ್ರಥಮ ಬಾರಿಗೆ ಶ್ರಮಜೀವಿ ಸರ್ವಾಧಿಕಾರದ ಪತಾಕೆಯನ್ನು ಎತ್ತಿಹಿಡಿದ ಪ್ಯಾರಿಸ್ ಕಮ್ಯೂನ್ ಕೇವಲ 72 ದಿನಗಳು ಮಾತ್ರ ಅಧಿಕಾರದಲ್ಲಿದ್ದು ನಂತರ ರಕ್ತದ ಮಡುವಿನಲ್ಲಿ ಮುಳುಗಿತು. ಇದೇ ಬಗೆಯಲ್ಲಿ 1905ರ ರಷ್ಯನ್ ಕ್ರಾಂತಿಯೂ ಸಹ ರೈತ ಕಾರ್ಮಿಕರ ನೆತ್ತರಿನಲ್ಲಿ ಮುಳುಗಿತು. ಆದರೆ ಅಕ್ಟೋಬರ್ ಮಹಾಕ್ರಾಂತಿ ಅತ್ಯದ್ಭುತವಾದುದಾಗಿದೆ, ಅದು ಶ್ರಮಜೀವಿ ಜನತೆಯ ಆಶಾದೀಪವನ್ನು ಬೆಳಗಿಸಿದೆ, ಮಾನವನಿಂದ ಮಾನವನ ಶೋಷಣೆಯನ್ನು ಕೊನೆಗಾಣಿಸಿದೆ, ಎಲ್ಲ ಬಗೆಯ ಸಾಮಾಜಿಕ ಮತ್ತು ಜನಾಂಗೀಯ ದಾಸ್ಯವನ್ನು ನೀಗಿಸಿದೆ; ಸಮಾಜವಾದ, ಶಾಂತಿ, ಸಮಾನತೆ ಮತ್ತು ಜನತೆಗಳ ನಡುವೆ ಸ್ನೇಹ ಸೌಹಾರ್ದಗಳ ತತ್ವವನ್ನು ಘೋಷಿಸಿದ್ದೇ ಅಲ್ಲದೆ ಕಾರ್ಯತಃ ಅದನ್ನು ಮಾಡಿದೆ.

ಶ್ರಮಜೀವಿ ಜನತೆಯ ದಿಗ್ವಿಜಯದ ಈ ಕ್ರಾಂತಿಯನ್ನು ಸುಳಿಯಲ್ಲೇ ಕತ್ತರಿಸಿ ಹಾಕಲು ಸಾಮ್ರಾಜ್ಯಶಾಹಿ ಮತ್ತು ಭೂಮಾಲಿಕ ಶಕ್ತಿಗಳು ಯತ್ನಿಸಿ ವಿಫಲ ಹೊಂದಿದುವು ಜರ್ಮನಿ, ಅಮೆರಿಕ, ಬ್ರಿಟನ್, ಫ್ರಾನ್ಸ್, ಜಪಾನ್ ಮತ್ತು ಇತರ 14 ರಾಷ್ಟ್ರಗಳು ಸೋವಿಯತ್ ರಿಪಬ್ಲಿಕ್‌ನ ಮೇಲೆ ಸಶಸ್ತ್ರವಾಗಿ ಪ್ರವೇಶ ಮಾಡಿದುವು. ಪ್ರತಿಕ್ರಾಂತಿಕಾರಿಗಳಿಗೆ, ಬಂಡವಾಳಗಾರರು ಮತ್ತು ಭೂಮಾಲಿಕರಿಗೆ ನೆರವನ್ನಿತ್ತು ಕ್ರಾಂತಿಕಾರೀ ರಾಜ್ಯವನ್ನು ಉರುಳಿಸಲು ಯತ್ನಿಸಿ ವಿಫಲಗೊಂಡುವು. ಕ್ರಾಂತಿ ಹೋರಾಟದಲ್ಲಿ ಪುಟಗೊಂಡಿದ್ದ ಸೋವಿಯತ್ ಜನತೆ ಸಾಮ್ರಾಜ್ಯಶಾಹಿಗಳ ಬೆದರಿಕೆಗಳಿಗೆ ಮಣಿಯದೆ ವಿಜಯ ಪತಾಕೆಯನ್ನು ಎತ್ತಿ ಹಿಡಿಯಿತು.

ಕ್ರಾಂತಿಕಾರೀ ಸರಕಾರ ಅಧಿಕಾರ ಕೈಗೆ ತೆಗೆದುಕೊಂಡ ಕೂಡಲೇ ಶಾಂತಿಯ ಘೋಷಣೆ ಮೊಳಗಿತು, ಉಳುವ ರೈತನೇ ಹೊಲದೊಡೆಯನೆಂದು ಸಾರಲಾಯಿತು, ಕಾರ್ಮಿಕರು ಮತ್ತು ರೈತರ ಸರಕಾರ ಸ್ಥಾಪಿಸಲು ತೀರ್ಮಾನಿಸಲಾಯಿತು. ಸೋವಿಯತ್ ಜನತೆ ನವ ಸಮಾಜವನ್ನು ಸೋವಿಯತ್ ಸಮಾಜವಾದೀ ಪದ್ಧತಿಯನ್ನು ಸ್ಥಾಪಿಸಲು ಹೆಜ್ಜೆಯಿರಿಸಿತು.

ಸಮಾಜವಾದೀ ನಿರ್ಮಾಣ ಕಾರ್ಯ

ಮೊದಲನೆಯ ಮಹಾ ಯುದ್ಧ, ಕ್ರಾಂತಿ, ಮತ್ತು ನಂತರದಲ್ಲಿ ನಡೆದ ಅಂತರ್ಯುದ್ಧ ಇವುಗಳಿಂದಾಗಿ ಸೋವಿಯತ್ ರಷ್ಯದ ಆರ್ಥಿಕ ಸ್ಥಿತಿಯು ಸಂಪೂರ್ಣವಾಗಿ ಮುರಿದುಬಿದ್ದಿತ್ತು. ಭೀಕರವಾದ ಕ್ಷಾಮ ಪರಿಸ್ಥಿತಿ ತಲೆದೋರಿತು. ಶ್ರಮಜೀವಿ ಸರಕಾರವನ್ನು ಉರುಳಿಸಲು ಬಂಡವಾಳಶಾಹಿಯನ್ನು ಮತ್ತೆ ಅಧಿಕಾರಕ್ಕೆ ತರಬಯಸುತ್ತಿದ್ದ ವಿರೋಧಿಗಳ ತಂಡಗಳ ಆತಂಕ ಬೇರೆ ಇತ್ತು. ಇಂಥ ವಿಷಮ ಸನ್ನಿವೇಶದಲ್ಲಿ ಬಂಡವಾಳಶಾಹಿ ದೇಶಗಳೆಲ್ಲವೂ ಸೋವಿಯತ್ ಸರಕಾರಕ್ಕೆ ನೆರವು ನೀಡಲು ನಿರಾಕರಿಸಿದುವು. ಸೋವಿಯತ್ ಸರಕಾರವನ್ನು ಆರಂಭದಲ್ಲೇ ಉರುಳುವಂತೆ ಮಾಡುವ ಉದ್ದಿಶ್ಯದಿಂದ, ಆರ್ಥಿಕವಾಗಿ ಸಂಪೂರ್ಣವಾಗಿ ಹಾಳಾಗಿರುವ ದೇಶ ಅಭಿವೃದ್ಧಿಯಾಗದಂತೆ ತಡೆದು ಅಸಹಾಯಕವಾಗಿ ಮಾಡುವ ಉದ್ದಿಶ್ಯದಿಂದ ಬಂಡವಾಳಶಾಹೀ ರಾಷ್ಟ್ರಗಳು ಆರ್ಥಿಕ ಪ್ರತಿಬಂಧ ಹಾಕಿದುವು.

ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಸೋವಿಯತ್ ಜನತೆ ಕೆಚ್ಚೆದೆಯಿಂದ ಈ ಸವಾಲನ್ನೆದುರಿಸಿತು. ಐಕ್ಯಕವಾಗಿ ರಷ್ಯದ ಜನತೆ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ನಿರ್ಧರಿಸಿತು. ದೇಶದಲ್ಲಿನ ಸಂಪತ್ತನ್ನು ರೂಢಿಸಿಕೊಂಡು ಸಮಾಜವಾದೀ ಪುನರ್ನಿರ್ಮಾಣ ಕಾರ್ಯದಲ್ಲಿ ತೊಡಗಿತು, ಕೃಷಿ ಪ್ರಧಾನ ದೇಶವಾಗಿ ಹಿಂದುಳಿದಿದ್ದ ರಾಷ್ಟ್ರವನ್ನು ಉನ್ನತ ಕೈಗಾರಿಕಾ ರಾಷ್ಟ್ರವನ್ನಾಗಿಸಲು ಮುನ್ನಡೆಯಿತು.

ಯೋಜನಾ ಬದ್ಧವಾದ ರೀತಿಯಲ್ಲಿ ನಿರ್ಮಾಣ ಕಾರ್ಯವನ್ನು ನಡೆಸಿಕೊಂಡು ಹೋಗಲು ಪಂಚವಾರ್ಷಿಕ ಯೋಜನೆಗಳು ರಚನೆಯಾದುವು. ಈ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಸೋವಿಯತ್ ಜನತೆ ಉತ್ಸಾಹದಿಂದ ಕೆಲಸಮಾಡಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿತು. ರಷ್ಯದಲ್ಲಿ ಹಿಂದೆ ಕಾಣಲಾಗದಿದ್ದ ಅನೇಕ ಕೈಗಾರಿಕೋದ್ಯಮಗಳು ಅತ್ಯಲ್ಪ ಕಾಲದಲ್ಲಿ ನಿರ್ಮಿತವಾಯಿತು. ಹೊಸಹೊಸ ನಗರಗಳು, ರೈಲುದಾರಿಗಳೂ, ಕಾರ್ಖಾನೆಗಳು, ಅಣೆಕಟ್ಟುಗಳು, ಯಂತ್ರಸ್ಥಾವರಗಳು, ತಲೆದೋರಿದುವು.

ಯಶಸ್ವಿಯಾಗಿ ಜಾರಿಗೊಳಿಸ್ಪಟ್ಟ ಪಂಚವಾರ್ಷಿಕ ಯೋಜನೆಗಳ ಮೂಲಕ ಸೋವಿಯತ್ ರಷ್ಯವು ಆಧುನಿಕ ಕೈಗಾರಿಕಾ ರಾಷ್ಟ್ರವಾಗಿ ಮಾರ್ಪಾಡಾಯಿತು. ಸಮಾಜವಾದೀ ಸಮಾಜದ ನಿರ್ಮಾಣಕ್ಕೆ ಬುನಾದಿಯಾಗಿ ಕೈಗಾರಿಕೆ ಬೆಳೆಯಿತು.

ಕೃಷಿ ಕ್ಷೇತ್ರದಲ್ಲಿ ಸಾಮೂಹೀಕರಣ

ಕ್ರಾಂತಿಯ ನಂತರದಲ್ಲಿ ಉಳುವವನೇ ಜಮೀನಿಗೆ ಒಡೆಯನೆಂದು ಸಾರಲಾಯಿತು. ಆದರೆ ಹಳೆಯ ಪದ್ಧತಿಯಿಂದಲೇ ವ್ಯವಸಾಯ ಕ್ರಮ ನಡೆಸುವುದು ಉತ್ಪಾದನೆಗೆ ಅಡ್ಡಿಯಾಗಿತ್ತು. ಕೃಷಿಕ್ಷೇತ್ರವನ್ನು ಆಧುನಿಕ ರೀತ್ಯ ಪುನರ್ಘಟಿಸುವ ಕಾರ್ಯ ಅತ್ಯಂತ ಅಗಾಗಿತ್ತು ಮತ್ತು ತೊಡಕಾಗಿತ್ತು. ಕೃಷಿ ಕ್ಷೇತ್ರವನ್ನು ಸಮಾಜವಾದೀ ರೀತಿ ಪುನರ್ಘಟಿಸುವ ಗುರುತರ ಕಾರ್ಯವನ್ನು ಶ್ರಮಜೀವಿಗಳ ಸರಕಾರ ನೆರವೇರಿಸಿತು. ಲಕ್ಷಾಂತರ ಮಂದಿ ಹಿಂದುಳಿದ ರೈತರನ್ನು ಸಾಮೂಹಿಕ ಕೃಷಿ ಕ್ಷೇತ್ರದಲ್ಲಿ ಶಸ್ತಿ ಪ್ರಭುತ್ವ ಕೃಷಿ ಕ್ಷೇತ್ರದಲ್ಲಿ ತರಲಾತು. ಪುರಾತನ ಆರ್ಥಿಕ ವ್ಯವಸ್ಥೆಯಲ್ಲಿ ಜೀವನದಲ್ಲಿ ರೂಢಿಗೊಂಡಿದ್ದ ರೈತ ಸಮೂಹವನ್ನು ಜಾಗೃತಗೊಳಿಸಲಾಯಿತು. ಸಾಮೂಹಿಕ ಕೃಷಿ ಕ್ಷೇತ್ರದ ಚಳವಳಿಯನ್ನು ಮುರಿಯಲು ಕುಲಕರು (ಭೂಮಾಲಿ) ತೀವ್ರವಾದ ಪ್ರತಿಭಟನೆಯನ್ನು ಇವರು, ಸೋವಿಯತ್ ವಿರೋಧೀ ದಯೆಬ್ಬಿಸಲು ಯತ್ನಿಸಿದರು, ಸಾಮೂಹಿಕಷಿ ಕ್ಷೇತ್ರಗಳಿಗೆ ಸೇರಿರುವ ರೈತರನ್ನು ಹಿಸುತ್ತಿದ್ದರು. ಆದರೆ ಕಮ್ಯೂನಿಸ್ಟ್ ಪಾರ್ಟಿ ಮತ್ತು ಸೋವಿಯತ್ ಸರಕಾರ ಈ ಪ್ರತಿಭಟನೆಯನ್ನು ಎದುರಿಸಿತು. ಕುಲಕರ ವರ್ಗವನ್ನು ಸಂಪೂರ್ಣವಾಗಿ ಶಗೊಳಿಸಿ ಅವರ ಭೂಮಿ ಕಾಣಿಗಳನ್ನು ಸಾಮೂಹಿಕ ಕೃಷಿ ಕ್ಷೇತ್ರಗಳಿಗೆ ವಗಾಯಿಸಲಾಯಿತು. ಸಾಮೂಹಿಕ ಕೃಷಿ ತ್ರ ಪದ್ಧತಿಯು ದೇಶಾದ್ಯಂತವೂ ವಿಯ ಸಾಧಿಸಿತು. ಜಮೀನಿನ ಖಾಸಗೀ ಒಡೆ ಹೋಗಿ ಸಾಮೂಹಿಕ ಒಡೆತನ ಅದ ಸ್ಥಾನವನ್ನಾಕ್ರಮಿಸಿತು. ಆಧುನಿಕ ಯಂತ್ರೋಪಕರಣಗಳ ಮೂಲಕ ವ್ಯವಸಾಯ ರ್ಯ ಆರಂಭವಾಯಿತು. ಸಾಮೂಹಿಕಕೃಷಿ ಪದ್ಧತಿಯು ವ್ಯವಸಾಯಾಭಿವೃಗೆ ಅಮಿತವಾದ ಅವಕಾಶವನ್ನು ಕಲ್ಪಿಸಿ.

ಸಾಂಸ್ಕತಿಕ ಕ್ಷೇತ್ರದಲ್ಲಿ

ಕೈಗಾರಿಕೆ ಮತ್ತು ಕೃಷಿ ಕ್ಷೇತ್ರದಲ್ಲಿ ಸಮಾಜವಾದಿ ಪುನರ್‌ನಿರ್ಮಾಣ ಕಾರ್ಯದೊಂದಿಗೇ ಸಸ್ಕೃತಿಕ ಕ್ಷೇತ್ರದಲ್ಲಿಯೂ ಸಹ ಕ್ರಾಂತಿಕಾರೀ ಬದಲಾವಣೆಯನ್ನು ತರಲಾಯಿತು ದೇಶಾದ್ಯಂತ ಶಾಲೆಗಳನ್ನು ತೆರೆಯುಯಿತು, ಸಾಂಸ್ಕೃತಿಕ ಮತ್ತು ಮನಜನೆಯ ಕೇಂದ್ರಗಳನ್ನು ಸ್ಥಾಪಿಸಲಾಯಿ. ಉಚ್ಚ ಶಿಕ್ಷಣ ಶಾಲೆಗಳನ್ನು ಎಲ್ಲೆಡೆಗಳಲ್ಲಿಯೂ ಸ್ಥಾಪಿಸಲಾಯಿತು. ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆರಲಾಯಿತು. ದೇಶದಲ್ಲಿನ ಅನಕ್ಷರತೆಯು ಅತ್ಯಲ್ಪ ಕಾಲದಲ್ಲೇ ಹೋಗಲಾಡಿಸು ಅವಕಾಶವನ್ನುಂಟು ಮಾಡಿತು. ವಿವಿಧ ಜನಾಂಗಗಳ ಭಾಷೆಗಳಿಗೂ ಸಮಾನವಾದ ಅವಕಾಶವನ್ನಿತ್ತು ಅಗಳ ಬೆಳವಣಿಗೆಯನ್ನು ಸಾಧಿಸಲಾಯಿ. ಕಾರ್ಮಿಕರ ಮತ್ತು ರೈತರ ಸಾಂಸ್ಕತಿಕ ಮಟ್ಟವನ್ನು ಉತ್ತಮಗೊಳಿಸಿತು.

ಅಕ್ಟೋಬರ್ ಸಮಾಜವಾದೀ ಮಹಾಕ್ರಾಂತಿಯು ಪಿದ ಆರರಲ್ಲೊಂದು ಭಾಗದಲ್ಲಿ ಸಮಾಜವಾದವನ್ನು ಸ್ಥಾಪಿಸಿ, ಶೋಷಣೆಯನ ನಿರ್ಮೂಲ ಮಾಡಿ, ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸಿತು. ಅಕ್ಟೋಬರ್ ಮಹಾಕ್ರಾಂತಿಯ ವಿಜಯ ಮತ್ತು ಸೋವಿಯತ್ ರಷ್ಯದ ಅದ್ಭುತ ಮುನ್ನಡೆ ವಿಶ್ವದ ದುಡಿ

1917ರ ಅಕ್ಟೋ
ಮಹಾಕ್ರಾಂತಿಯ
ದಂದು ಸೋವಿಯತ
ವರ್ಗದ ಸರಕಾರ ಶ
ರ್ದಪೇ ತನ್ನ ವಿದೇ
ಘೋಷಿಸಿತು. ಮೊ
ದ್ಧ ನಡೆಯುತ್ತಿದ್ದ ಕ
ಏಳ್ಗೆಯಾಗಬೇಕಾದ
ವೃದ್ಧಿಯಾಗಬೇಕಿದ್ದ
ಗತ್ಯವೆಂದು ಸೋವಿ
ಶಾಂತಿಯುತವಾದ
ಯುತವಾದ ಬಾಳ್ವೆ
ದುಡಿಯುವ ಜನತೆ
ಉತ್ತಮಗೊಳಿಸಿಕೊ
ಸಾಧಿಸಲು ಸಾಧ್ಯವೆ
ಜನಾಂಗಗಳ ದುಡಿ
ಒಂದೇ ಎಂದು ಸ
ಸಾರಿತು.

ಅಂದಿನಿಂದ ಕ
ನಿಸ್ಟ್ ಪಾರ್ಟಿಯ
ಯತ್ ಯೂನಿಯನ
ಗಾಗಿ ಶ್ರಮಿಸುತ್ತಿದೆ.



ಫಾಸಿಸ
ದಿಗ್ವಿ

ಶಾಂತಿಯುತವಾ
ಗಾಗಿ, ದೇಶದ ಔ
ಸಮಾಜವಾದೀ ಸ
ಕ್ಕಾಗಿ ಶ್ರಮಿಸುತ್ತಿ
ಯೂನಿಯನ್ ಫ
ಎದುರಿಸಬೇಕಾಯಿ
ಯೋಜನೆಗಳನ್ನು
ಗಳು, ಯಂತ್ರಗಳು
ಪಯೋಗಿ ವಸ್ತುಗ

ಯುವ ಜನತೆಯನ
ವಸಾಹತು ದೇಶ
ಚನಾ ಚಳುವಳಿಗೆ
ಶಾಂತಿ, ಸ್ವಾತಂತ್ರ
ಯ ಹೊಸ ಯುಗ

...ಾಂತಿಗಾಗಿ ಶ್ರಮಿಸುತ್ತಿರುವ ಸೋವಿಯತ್ ರಷ್ಯಾ


...ಮಾಜವಾದೀ
...ವಿಜಯ ದಿನ
...ದುಡಿಯುವ
...ಮತ್ತು ಸೌಹಾ
...ನೀತಿಯೆಂದು
...ು ಮಹಾಯು
...ು. ಜನತೆಯ
...ಾಷ್ಟ್ರದ ಅಭಿ
...ಶಾಂತಿ ಅತ್ಯ
...ಜನತೆ ಸಾರಿತು.
... ಸೌಹಾರ್ದ
... ಮಾತ್ರವೇ
...ಜೀವನವನ್ನು
...ಪ್ರಗತಿಯನ್ನು
...ಎಲ್ಲ ದೇಶಗಳ
...ಜನತೆಯು
...ಯತ್ ಜನತೆ

...ರಿಗೆ ಕಮ್ಯೂ
...ಷ್ಟ್ರದಲ್ಲಿ ಸೋವಿ
...ತವಾಗಿ ಶಾಂತಿ

ಸೋವಿಯತ್ ರಷ್ಯ, ಯುದ್ಧಕ್ಕಾಗಿ ಸಿದ್ಧತೆ ನಡೆಸಬೇಕಾಯಿತು..

ಇಡೀ ವಿಶ್ವವನ್ನೇ ಯುದ್ಧದ ಕಾರ್ಮೋಡದಲ್ಲಿ ಮುಳುಗಿ ಹಿಟ್ಲರನ ನಾಯಕತ್ವದಲ್ಲಿ ತಲೆಯೆತ್ತಿದ್ದ ಜರ್ಮನಿಯ ಫಾಸಿಸಂ ವಿಶ್ವಸ್ವಾಮ್ಯವನ್ನು ಪಡೆಯಲು ಯುದ್ಧ ಘೋಷಿಸಿತು. ಹಿಟ್ಲರನ ಫಾಸಿಸ್ಟ್ ಸೈನ್ಯಗಳಿಗೆ ಒಂದಾದಮೇಲೊಂದು ಯೂರೋಪಿನ ರಾಷ್ಟ್ರಗಳು ಮಣಿದುವು. ಜಗತ್ತಿನ ಮೇಲೆ ಫಾಸಿಸಮ್ಮಿನ ಕ್ರೂರ ಅಟ್ಟಹಾಸದ ನೆರಳು ಬಿದ್ದಿರುವುದೆಂಬ ಭೀತಿ ಜನತೆಯಲ್ಲಿ ಮೂಡಿತು. ಇನ್ನು ಶತಮಾನಗಳ ಕಾಲ ನಾಗರಿಕತೆ, ಪ್ರಜಾಪ್ರಭುತ್ವಗಳು ಅಳಿದು ಫಾಸಿಸಂನ ಕ್ರೂರ ದಬ್ಬಾಳಿಕೆ ನಡೆಯುವುದೆಂದು ಭೀತಿ ಹಬ್ಬಿತ್ತು. ಮಾನವ ಸಮಾಜದ ಮೇಲೆ ಕವಿದಿದ್ದ ಈ ಕಾರ್ಮೋಡವನ್ನು ಸೋವಿಯತ್ ಜನತೆ ನಿವಾರಿಸಿತು.

ಯೂರೋಪಿನ ಹಲವು ರಾಷ್ಟ್ರಗಳನ್ನು ಕಬಳಿಸಿದ ಹಿಟ್ಲರನ ವಕ್ರದೃಷ್ಟಿ ಸೋವಿಯತ್ ಯೂನಿಯನ್ನಿನ ಮೇಲೆ ಹರಿಯಿತು. ಹಿಟ್ಲರನ ಸೇನೆಗಳು ಸೋವಿಯತ್ ಒಕ್ಕೂಟದ ಮೇಲೆ ಧಾಳಿ ನಡೆಸಿದವು. ಸೋವಿಯತ್ ಕೆಂಪು ಸೇನೆ ಈ ಧಾಳಿಯನ್ನೆದುರಿಸಲು ಸರ್ವ ಸಿದ್ಧತೆ ನಡೆಸಿತ್ತು. ಆರಂಭದಲ್ಲಿ ಹಿಟ್ಲರನ ಸೇನೆಗಳು ವಿಜಯವನ್ನು ಪಡೆದು ಸ್ಟಾಲಿನ್ ಗ್ರಾಡಿನವರೆಗೆ ಮುಂದೆ ಹೋಯಿತು. ಅಮೇರಿಕಾ ಬ್ರಿಟನ್‌ಗಳು ಈ ಯುದ್ಧದಲ್ಲಿ ಸೋವಿಯತ್ ಯೂನಿಯನ್ನಿನೊಂದಿಗೆ ತಾವೂ ಸಹ ಫಾಸಿಸಮ್ಮಿನ ವಿರೋಧವಾಗಿ ಹೋರಾಡುವುದರಲ್ಲಿ ಮಿತ್ರ ರಾಷ್ಟ್ರವೆಂದು ಘೋಷಿಸಿದ್ದರೂ ಸಹ ಯಾವ ನೆರವನ್ನೂ ನೀಡದೆ, ದ್ವಿತೀಯ ರಂಗವನ್ನು ನಿರ್ಮಿಸುವ ಕಾರ್ಯವನ್ನು ತಳ್ಳಿಹಾಕಿತು. ಹಿಟ್ಲರನ ಧಾಳಿಗೆ ಸೋವಿಯತ್ ಯೂನಿಯನ್ ಮುರಿದು ಬಿದ್ದು ನಾಶವಾಗುವುದೆಂದೂ ಹಾಗೆ ಆಗಲೆಂದೂ ಅವರು ಹಾರೈಸಿದ್ದರು. ಆದರೆ ಕೆಚ್ಚೆದೆಯ, ಕೆಂಪು ಸೇನೆ ಮತ್ತು ಸ್ವಾತಂತ್ರ್ಯಪ್ರಿಯ ಸೋವಿಯತ್ ಜನತೆ ಅವರಆಶಯವನ್ನು ಮಣ್ಣುಗೂಡಿಸಿದುವು. ಇನ್ನೂ ಕೆಲವೇ ದಿನಗಳಲ್ಲಿ ಮಾಸ್ಕೋದಲ್ಲಿ ಕಾಲಿರಿಸುವೆನೆಂದು ಮೆರೆಯುತ್ತಿದ್ದ ಹಿಟ್ಲರನ ಅಟ್ಟಹಾಸವನ್ನು ಮುರಿಯಿತು. ಸ್ಟಾಲಿನ್‌ಗ್ರಾಡಿನಲ್ಲಿ ಸೋವಿಯತ್ ಜನತೆ ಹೆಜ್ಜೆ ಹೆಜ್ಜೆಗೂ ಫಾಸಿಸ್ಟ್ ಸೇನೆಯನ್ನು ಎದುರಿಸಿ ಹಿಮ್ಮೆಟ್ಟಿಸಿತು. ಸ್ಟಾಲಿನ್‌ಗ್ರಾಡ್ ಕದನವನ್ನು ದ್ವಿತೀಯ ಮಹಾಯುದ್ಧದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲಾಗಿದೆ. ವಿಜಯದಿಂದ ಮುನ್ನಡೆಯುತ್ತಿದ್ದ ಫಾಸಿಸ್ಟ್ ಸೇನೆಗಳನ್ನು ಸೋವಿಯತ್ ಸೇನೆಗಳು ಬರ್ಲಿನ್‌ನವರೆವಿಗೆ ಹಿಮ್ಮೆಟ್ಟಿಸಿದುವು. ಫಾಸಿಸಂನ ಮೇಲೆ ದಿಗ್ವಿಜಯವನ್ನು ಸ್ಥಾಪಿಸಿ ಇಡೀ ಮಾನವ ಕೋಟಿಯನ್ನೇ ಬಿಡುಗಡೆ ಮಾಡಿದುವು. ಸೋವಿಯತ್ ಯೂನಿಯನ್ ಯುದ್ಧದಲ್ಲಿ ಅಪಾರವಾದ ಕಷ್ಟ-ನಷ್ಟಗಳನ್ನನುಭವಿಸಿತು. ಲಕ್ಷಾಂತರ ಯೋಧರು ದೇಶಕ್ಕಾಗಿ, ಸಮಾಜವಾದೀ ಸಮಾಜದ ರಕ್ಷಣೆಗಾಗಿ ಪ್ರಾಣ ನೀಡಿದರು.



★

ಕ್ರಾಂತಿಯ ಮಹಾ ಸೇನಾನಿ

ಜೋಸೆಫ್ ವಿಸಾರಿಯ-ನೋವಿಚ್ ಸ್ಟಾಲಿನ್

★

...ಮೇಲೆ
...ಿು

...ಜನತೆಯು ಏಳಿಗೆ
...ಗೀಕರಣಕ್ಕಾಗಿ,
...ದ ನಿರ್ಮಾಣ
...ಸೋವಿಯತ್
...ನ ಧಾಳಿಯನ್ನು
...ಪಂಚವಾರ್ಷಿಕ
...ರಿಸಿ ಟ್ರಾಕ್ಟರು
..., ಇತರ ಜನೋ
...ತಯಾರಿಸುತ್ತಿದ್ದ

...ಗ್ಯತಗೊಳಿಸಿತು.
...ಬಂಧವಿಮೋ
...ಟ್ಟಿತು ವಿಶ್ವ
...ತ್ತು ಸಮಾನತೆ

ಯುದ್ಧಾನಂತರದಲ್ಲಿ....

ಯುದ್ಧಾನಂತರದಲ್ಲಿ ಸೋವಿಯತ್ ರಷ್ಯ ಪುನರ್ನಿರ್ಮಾಣದಲ್ಲಿ ತೊಡಗಿತು. ಸೋವಿಯತ್ ರಷ್ಯವೊಂದೇ ಬಂಡವಾಳಶಾಹಿ ಜಗತ್ತಿನಿಂದ ಹೊರಬಂದಿದ್ದಲ್ಲಿ, ದ್ವಿತೀಯ ಮಹಾಯುದ್ಧದ ಪರಿಣಾಮವಾಗಿ ಜೆಕೋಸ್ಲೋವೇಕಿಯಾ, ಹಂಗೇರಿ, ರುಮೇನಿಯಾ, ಪೋಲೆಂಡ್, ಯುಗೋಸ್ಲಾವಿಯಾ ಮೊದಲಾದ ಪೂರ್ವ ಯೂರೋಪ್ ರಾಷ್ಟ್ರಗಳು ಬಂಡವಾಳ ಶಾಹಿಯನ್ನು ನಿರ್ಮೂಲಗೊಳಿಸಿ ಸಮಾಜವಾದದತ್ತ ಸಾಗಲು ಜನತಾ ಪ್ರಜಾಪ್ರಭುತ್ವಗಳು ಸ್ಥಾಪಿತವಾದವು. ಸೋವಿಯತ್ ಯೂನಿಯನ್ ತನ್ನ ರಾಷ್ಟ್ರದ ಪುನರ್ನಿರ್ಮಾಣದ ಬೃಹತ್ ಕಾರ್ಯಭಾರದೊಂದಿಗೇ ಈ ರಾಷ್ಟ್ರಗಳಿಗೂ ಸಹ ನೆರವನ್ನಿತ್ತಿತು. 600 ಮಿಲಿಯನ್ ಜನತೆಯಿರುವ ಚೀಣಾವು ಬಂಡವಾಳಶಾಹಿ ಜಗತ್ತಿನಿಂದ ಹೊರಬಂದು, ಸಮಾಜವಾದೀ ಶಿಬಿರದಲ್ಲಿ ಸೇರಿದೆ. ರಷ್ಯಾ-ಚೀಣಗಳ ಸ್ನೇಹ ಬಾಂಧವ್ಯ ಸಾಮ್ರಾಜ್ಯವಾದಿಗಳಿಗೆ ಭಾರೀ ಪೆಟ್ಟನ್ನಿತ್ತಿದೆ.

ಸತತವಾಗಿ ಶಾಂತಿಯನ್ನು ಬಯಸುತ್ತಿರುವ ಸೋವಿಯತ್ ರಷ್ಯ, ವಿಶ್ವಶಾಂತಿಯನ್ನು ಚಿರಕಾಲ ಸ್ಥಾಪಿಸಲು, ಇತರ ರಾಷ್ಟ್ರಗಳೊಂದಿಗೆ ಒಡಗೂಡಿ ವಿಶ್ವಸಂಸ್ಥೆಯನ್ನು ಸ್ಥಾಪಿಸಿತು. ವಿಶ್ವಸಂಸ್ಥೆಯು ಸ್ಥಾಪನೆಯಾದಂದಿನಿಂದಲೂ ರಷ್ಯವು ಶಾಂತಿಗಾಗಿ, ವಸಾಹತುಗಳ ವಿಮೋಚನೆಗಾಗಿ ಶ್ರಮಿಸುತ್ತಿದೆ.

ಶೀತ ಯುದ್ಧ

ದ್ವಿತೀಯ ಮಹಾಯುದ್ಧದ ನಂತರದಲ್ಲೇ, ಬಂಡವಾಳಶಾಹಿ ರಾಷ್ಟ್ರಗಳು, ಸಾಮ್ರಾಜ್ಯಶಾಹಿಗಳು ಸೋವಿಯತ್ ಯೂನಿಯನ್ನಿನ ಪ್ರಾಬಲ್ಯವನ್ನು ಮುರಿಯಲು, ಪೂರ್ವ ಯೂರೋಪಿನ ಜನತಾ ಪ್ರಜಾಪ್ರಭುತ್ವಗಳಲ್ಲಿ ಮತ್ತೆ ಬಂಡವಾಳಶಾಹಿಯನ್ನು ತಂದಿರಿಸಲು ಹೊಸ ರೀತಿಯಲ್ಲಿ ಶೀತ ಯುದ್ಧವನ್ನಾರಂಭಿಸಿದುವು. ಸೋವಿಯತ್ ಯೂನಿಯನ್ನಿನ ವಿರುದ್ಧವಾಗಿ ಜನತಾ ಪ್ರಜಾಪ್ರಭುತ್ವಗಳ ವಿರುದ್ಧವಾಗಿ ಒಂದೇ ಸಮನಾಗಿ ಸುಳ್ಳು ಪ್ರಚಾರವನ್ನು ಹೇಯವಾದ ಅಪಪ್ರಚಾರವನ್ನು ಸಾಗಿಸಿತು. ಗೂಢಚಾರರುಗಳನ್ನು ಹಾಗೂ ತಮ್ಮ ಭಂಟರನ್ನು ಕಳಿಸಿ ವಿದ್ರೋಹಕಾರಿ ಚಟುವಟಿಕೆಯನ್ನು ಉತ್ತೇಜಿಸಿತು. ರಷ್ಯದ ಮೇಲೆ ಬೆದರಿಕೆ ಹಾಕಲು ಮಿಲಿಟರಿ ಕೂಟಗಳನ್ನು, ಮಿಲಿಟರಿ ನೆಲೆಗಳನ್ನು ಸ್ಥಾಪಿಸಿತು. ಆದರೆ ಸೋವಿಯತ್ ಯೂನಿಯನ್ ಇದಾವುದಕ್ಕೂ ಜಗ್ಗದೆ ಸಾಮ್ರಾಜ್ಯಶಾಹಿಗಳಿಗೆ ಸರಿಯಾದ ಉತ್ತರವನ್ನಿತ್ತಿತು.

ಅಲ್ಲಲ್ಲಿ ಸಣ್ಣ ಪುಟ್ಟ ಯುದ್ಧಗಳನ್ನು ಆರಂಭಿಸಿ ಆದಷ್ಟು ಪ್ರಚೋದನೆ ನಡೆಸಲು ಸಾಮ್ರಾಜ್ಯಶಾಹಿಗಳು ಯತ್ನಿಸಿದರು. ಸಾಮ್ರಾಜ್ಯಶಾಹಿ ರಾಷ್ಟ್ರಗಳ ನೇತೃತ್ವದಲ್ಲಿರುವ ಅಮೆರಿಕ ಸಾಹಸೀ ಕಾರ್ಯಗಳಲ್ಲಿ ತೊಡಗಿತು. ಕೊರಿಯಾ ಯುದ್ಧ ಇದಕ್ಕೆ ಸಾಕ್ಷಿಯಾಗಿದೆ. ರಷ್ಯ, ಅಮೆರಿಕದ ಸಾಮ್ರಾಜ್ಯಶಾಹಿಗಳ ಸಾಹಸೀಕೃತ್ಯಗಳಿಗೆ, ಶೀತಯುದ್ಧದ, ಶಕ್ತಿ ಕೇಂದ್ರಗಳ ನೀತಿಗೆ ತಲೆಬಾಗದೆ ಶಾಂತಿಗಾಗಿ ಹೋರಾಟವನ್ನು ಸಾಗಿಸಿತು.

ಮಿಲಿಟರಿ ಕೂಟಗಳಿಗೆ ವಿರೋಧ


ಶಕ್ತಿ ಕೇಂದ್ರಗಳ ನೀತಿಯನ್ನನುಸರಿಸುತ್ತಿರುವ ಸಾಮ್ರಾಜ್ಯಶಾಹಿಗಳು ನ್ಯಾಟೋ, ಸಿಯಾಟೋ, ಮೆಡೋ ಮತ್ತು ಇನ್ನಿತರ ಬಗೆಯ ಮಿಲಿಟರಿ ಕೂಟಗಳನ್ನು ಆಕ್ರಮಣಕಾರೀ ಉದ್ದಿಶ್ಯದಿಂದ ರಚಿಸಿರುವುದರ ವಿರುದ್ಧವಾಗಿ ಸೋವಿಯತ್ ಯೂನಿಯನ್ ಹೋರಾಡುತ್ತಿದೆ. ಮಿಲಿಟರಿ ಕೂಟಗಳನ್ನು, ಸೈನ್ಯ ನೆಲೆಗಳನ್ನು ರಚಿಸುವುದರಿಂದ ಅವು ಶಾಂತಿ ಸಾಧಕವಾಗುವುದಿಲ್ಲವೆಂದು ಘೋಷಿಸಿದೆ.

ವಿಶ್ವಸಂಸ್ಥೆಯಲ್ಲೂ ಮತ್ತಿತರ ಅಂತರ ರಾಷ್ಟ್ರೀಯ ಸಮಾವೇಶಗಳಲ್ಲೂ ಮಿಲಿಟರಿ ಕೂಟಗಳ ವಿರೋಧವಾಗಿ ರಷ್ಯವು ಶಾಂತಿ ನೀತಿಯನ್ನು ಪ್ರತಿಪಾದಿಸುತ್ತಿದೆ. ಮಿಲಿಟರಿ ಕೂಟಗಳಿಗೆ ವಿರೋಧವಿರುವ ಶಾಂತಿಪ್ರಿಯ ರಾಷ್ಟ್ರಗಳೊಂದಿಗೆ ಒಡಗೂಡಿ ಜಂಟಿಯಾಗಿ ರಷ್ಯ ತನ್ನ ಪ್ರತಿಭಟನೆಯನ್ನು ತೋರಿಸಿದೆ. ಸಾಮ್ರಾಜ್ಯಶಾಹಿಗಳ ಆಕ್ರಮಣವನ್ನು ಎದುರಿಸುವ ಸಲುವಾಗಿ, ಶಾಂತಿಯನ್ನು ಕಾಪಾಡಲು ಸಮಾಜವಾದೀ ರಾಷ್ಟ್ರಗಳ ಒಕ್ಕೂಟವನ್ನು ಸ್ಥಾಪಿಸಿ, ವಾರ್ಸಾ ಒಪ್ಪಂದವನ್ನು ಸೋವಿಯತ್ ಯೂನಿಯನ್ ಮಾಡಿಕೊಂಡಿದೆ. ಯಾವ ಸಂದರ್ಭದಲ್ಲೇ ಆಗಲೀ ಈ ಒಪ್ಪಂದದ ಮೂಲಕವಾಗಿ ಆಕ್ರಮಣಕಾರೀ ಕೃತ್ಯವೆಸಗುವುದು ಅದರ ಉದ್ದಿಶ್ಯವಲ್ಲವೆಂದೂ, ಶಾಂತಿ ಪರಿಪಾಲನೆ ಮತ್ತು ರಕ್ಷಣೆಯೇ ಇದರ ಉದ್ದಿಶ್ಯವೆಂದೂ ಸಾರಿದೆ. ಸಾಮ್ರಾಜ್ಯಶಾಹಿಗಳು ಮಿಲಿಟರಿ ಕೂಟಗಳನ್ನು ವಿಸರ್ಜಿಸಿದಲ್ಲಿ ವಾರ್ಸಾ ಒಪ್ಪಂದವೂ ಸಹ ವಿಸರ್ಜನೆಯಾಗುವುದೆಂದು ಘೋಷಿಸಿದೆ.

ವಿಶ್ವಶಾಂತಿ ಮತ್ತು ನಿಶ್ಶಸ್ತ್ರೀಕರಣಕ್ಕಾಗಿ ಯತ್ನ

ಎಲ್ಲ ಬಗೆಯ ಅಂತರ ರಾಷ್ಟ್ರೀಯ ಬಿಕ್ಕಟ್ಟಿನ ಪ್ರಶ್ನೆಗಳನ್ನು ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಬೇಕೆಂದು ಸೋವಿಯತ್ ಯೂನಿಯನ್ ಘೋಷಿಸಿದೆ, ಘೋಷಿಸಿರುವುದು ಮಾತ್ರವಲ್ಲ ಕಾರ್ಯರೂಪದಲ್ಲಿ ಅದನ್ನು ತೋರಿಸಿಕೊಟ್ಟಿದೆ. ಕೊರಿಯಾ ಯುದ್ಧಸ್ತಂಭನ ಒಪ್ಪಂದದಲ್ಲಿ ಇಂಡೋಚೀಣದ ಪ್ರಶ್ನೆಯಲ್ಲಿ

(ಕೊನೇ ಪುಟ ನೋಡಿ)



ವಿ. ಐ. ಲೆನಿನ್ ಕ್ರಾಂತಿಯ ವಿಜಯವನ್ನು ಘೋಷಿಸುತ್ತಿರುವುದು

ಸ್ಪುಟ್ನಿಕ್ ಮತ್ತು ವಿವಿಧ ದೃಷ್ಟಿಕೋನ !

ಸೋವಿಯತ್ ರಷ್ಯಾವು ಅಂತರಿಕ್ಷದಲ್ಲಿ ಹಾರಬಿಟ್ಟ "ಸ್ಪುಟ್ನಿಕ್" (ಉಪಗ್ರಹದ ಹೆಸರು) ವಿಶ್ವದ ಎಲ್ಲಾ ರಾಷ್ಟ್ರಗಳಲ್ಲಿ ಬಿರುಗಾಳಿ ಎಬ್ಬಿಸಿದೆ. "ಸ್ಪುಟ್ನಿಕ್" ಹುಟ್ಟಿಸಿದ ಪ್ರತಿಕ್ರಿಯೆ ಸ್ವಾರಸ್ಯವಾದುದಾಗಿದೆ.

ಂ ಂ ಂ ಂ

ನಮ್ಮ ಅಂತರಿಕ್ಷ ವಲಯವನ್ನು ಬಲಾತ್ಕಾರವಾಗಿ ಪ್ರವೇಶಿಸುವ ಯತ್ನವನ್ನು "ಸ್ಪುಟ್ನಿಕ್" ದ್ವಾರಾ ರಷ್ಯಾ ಮಾಡಿದೆಯೆಂದು ಅಮೆರಿಕನರು ಆಪಾದಿಸಿದ್ದಾರೆ. ಅದು ಸರಿ. ಅಂತರಿಕ್ಷ ವಲಯವಲ್ಲದಿದ್ದರೂ (ಇದರಲ್ಲಿ ಯಾರಿಗೂ ಹಕ್ಕಿಲ್ಲ) ಸ್ಟೇಟ್ ಇಲಾಖೆ, ರಕ್ಷಣಾ ಹಾಗೂ ವಿಜ್ಞಾನ ಕ್ಷೇತ್ರಗಳಲ್ಲೂ ತನ್ನಿಮಿತ್ತ ಅಮೆರಿಕನ್ ರಾಜಕೀಯಾಕಾಶದಲ್ಲೂ ಬಲಾತ್ಕಾರದ ಪ್ರವೇಶ ಮಾಡಿ "ಸ್ಪುಟ್ನಿಕ್" ಸುದ್ದಿ ಅನಾವಶ್ಯಕ ಗೊಂದಲವೆಬ್ಬಿಸಿದ್ದು ನಿಜ. ಹಳೆಯ ಕ್ರಾಂತಿಯ ಬದಲು, ಇದೂ "ಸ್ಪುಟ್ನಿಕ್" ಯುಗದ ಕಮ್ಯೂನಿಸ್ಟರ ಹೊಸ ಕ್ರಾಂತಿಯೆಂದು ಅಮೆರಿಕದ ಅನ್ ಅಮೆರಿಕನ್ ಸಮಿತಿ ರೇಗಾಡುತ್ತಿದೆಯಂತೆ.

ಭೂಮಿಯ ರಚನೆಯ ವಿಷಯ ಹೆಚ್ಚಿನ ತಿಳಿವಳಿಕೆ ಪಡೆಯಲಿಕ್ಕಾಗಿ "ಸ್ಪುಟ್ನಿಕ್" ಸಾಧ್ಯ ಮಾಡಿದೆ ಎಂದು ರಷ್ಯಾ ಹೇಳಿದೆ.

ರಷ್ಯಾ ಹೇಳಿದ್ದನ್ನೆಲ್ಲಾ ನಂಬದಿರುವ ಅಮೆರಿಕಾ ಕೂಡಲೇ ವಿರೋಧಾಭಿಪ್ರಾಯ ವ್ಯಕ್ತಗೊಳಿಸಿದೆ: ಅಮೆರಿಕಾ ಮತ್ತಿತರ "ಸ್ವತಂತ್ರ ರಾಷ್ಟ್ರಗಳ" ರಚನೆಯ ಬಗ್ಗೆ ತಿಳಿಯಲಿಕ್ಕಾಗಿಯಲ್ಲದೆ, ಭೂಮಿಯ ರಚನೆಯನ್ನು ತಿಳಿಯಲಿಕ್ಕಲ್ಲ! ಇದು ರಷ್ಯಾದ ಅಂತರ್ರಾಷ್ಟ್ರೀಯ ಕಮ್ಯೂನಿಸಂನ ವಿಕಾಸ ರೂಪ, ಇದರಿಂದಾಗಿ ಅಂತರ್ ಬ್ರಹ್ಮಾಂಡ ಕಮ್ಯೂನಿಸಂ ಹೆಡೆ ಎತ್ತಿದೆ ಎಂದು ಡಲ್ಲೆಸ್‌ರವರ ದೃಷ್ಟಿ ಕೋನವಾಗಿದೆ.

ಂ ಂ ಂ ಂ

ಗಂಟೆಗೆ 18,000 ವೇಗದಿಂದ "ಸ್ಪುಟ್ನಿಕ"ನ್ನು ಹಾರಿಸಲಾಗಿದೆ. ಇದೇ ರಾಕೆಟ್ ಅಮೆರಿಕಾದ ನ್ಯೂಯೋರ್ಕ್ ಮೇಲೆ (5000 ಮೈಲು ದೂರ) ಸುಲಭವಾಗಿ ಬಾಂಬೆಸೆಯ ಬಲ್ಲುದೆಂದು "ಒಬ್ಸರ್ವರ್ ಸರ್ವಿಸ್" ಪತ್ರಿಕೆಹೇಳಿದೆ. ಇದನ್ನು ಓದಿದ ನ್ಯೂಯಾರ್ಕ್ ನಾಗರಿಕರು ಈಗಾಗಲೇ ವಲಸೆ ಹೋಗಲಾರಂಭಿಸಿದ್ದಾರಂತೆ.

ಂ ಂ ಂ ಂ

ಚಂದ್ರನನ್ನು ಮುಟ್ಟಲು ಗಂಟೆಗೆ 25,000 ಮೈಲು ವೇಗಬೇಕು. ರಷ್ಯಾ ಇದನ್ನು ಸಾಧಿಸಬಲ್ಲುದೆಂದೂ, ಇದಕ್ಕೆ ತಕ್ಕ ವ್ಯವಸ್ಥೆ—ಮನುಷ್ಯನನ್ನು ಕೂರಿಸಿ ಕಳಿಸಲು ಬೇಕಾದ ರಚನೆಯೊಂದನ್ನು ರಷ್ಯನರು ಯತ್ನಿಸುತ್ತಿದ್ದಾರೆಂದು ಹೇಳಲಾಗಿದೆ ಅವರಿಗೆ ಬೇಕಾದ ಆಹಾರವನ್ನು ಈ ರಚನೆ (ಚಂದ್ರನಗರಿಯೆಂದು ಇದರ ಹೆಸರು)ಯಲ್ಲೇ ಬೆಳೆಸಲಾಗುವ ವ್ಯವಸ್ಥೆ ಮಾಡಲಾಗುವುದಂತೆ. ಭೂಮಿ

ತಿರುಗುಬಾಣ

ಯಲ್ಲಿ ಬೆಳೆಯುವ ಕ್ಯಾರಟ್, ಟೊಮೆಟೊ "ಚಂದ್ರ ನಗರಿ"ಯಲ್ಲಿ ಎಷ್ಟೋ ಪಾಲು ದೊಡ್ಡದಾಗಿ ಬೆಳೆಯಬಹುದೆಂದು ಹೇಳಲಾಗಿದೆ.

ಂ ಂ ಂ ಂ

ಆಹಾರ ಧಾನ್ಯ—ತರಕಾರಿ ಎಷ್ಟೋ ಪಾಲು ದೊಡ್ಡ ದಾಗುವುದಾದರೆ ಭಾರತದ ಜನತೆ ಪ್ರಪ್ರಥಮವಾಗಿ ಪ್ರಾಯೋಗಿಕ "ಚಂದ್ರ ನಗರಿ"ಯಲ್ಲಿರಲು ತಾಮುಂದು ನಾಮುಂದೆಂದು ನುಗ್ಗಬಹುದು. ಇದರಲ್ಲಿ ಕಾಳ ಸಂತೆ ಕದೀಮರೂ, ದಾಸ್ತಾನುಕಾರರೂ, ಸಟ್ಟಾ ವ್ಯಾಪಾರಿಗಳೂ ಸೇರಬಹುದಾದುದರಿಂದ, ರಷ್ಯನರು, ಆಯ್ಕೆಯಲ್ಲಿ ಮುಂಜಾಗ್ರತೆ ವಹಿಸುವುದುತ್ತಮ. ಇಲ್ಲವಾದಲ್ಲಿ ಬಂಡವಾಳಶಾಹಿತ್ವದ ಹುಟ್ಟು ತಲೆದೋರಿ ಚಂದ್ರನಲ್ಲೂ ಅದನ್ನು ದಮನ ಮಾಡಲು ಕ್ರಾಂತಿಯ ಹುಟ್ಟಾದೀತು!

ಅಂದಹಾಗೆ ಕ್ರಾಂತಿಯಿಂದ ಇವರನ್ನು ಮಟ್ಟಹಾಕಬೇಕಾಗಿಲ್ಲ. ಕೇರಳದ ಕೈಗಾರಿಕಾ ಮಂತ್ರಿಯನ್ನು ಅಲ್ಲಿಗೆ ಕರೆದುಕೊಂಡರೆ ಭಾರತೀಯ ಬಂಡವಳಿಗರು ಹೆದರಿ ಶಾಂತಿಯುತ ಸಹಬಾಳ್ವೆಗೆ ಒಪ್ಪಬಹುದು.

ಂ ಂ ಂ ಂ

ಚಂದ್ರ ಮಂಡಲ ಅತಿ ಶೀತಲವಾಗಿದ್ದು ರಷ್ಯಾ ತನ್ನ ಚಂದ್ರಯಾನಕ್ಕೆ ಅಮೆರಿಕನರನ್ನೂ ಪ್ರವಾಸಿಗಳನ್ನಾಗಿ ತೆಗೆದುಕೊಳ್ಳುವುದು ಉತ್ತಮ. ಅಮೆರಿಕನರು ಶೀತಲ ಯುದ್ಧ ಪ್ರವೀಣರು ತಾನೇ!

ಚಂದ್ರನಲ್ಲಿ ಎಣ್ಣೆ ಸಿಕ್ಕುವುದು ಎಂದು ಕೇಳಿದ ಅಮೆರಿಕಾದ "ತೈಲ ರಾಜ"ರುಗಳೆದೆಯಲ್ಲಿ ಅಸೂಯೆಯ ಬೆಂಕಿಹತ್ತಿದೆ.

ಂ ಂ ಂ ಂ

ಮಧ್ಯ ಪ್ರಾಚ್ಯದಲ್ಲಿ ಕಮ್ಯೂನಿಸ್ಟ್ ಭಯ ಹುಟ್ಟಿಸಿ, ಎಣ್ಣೆ ದರೋಡೆ ನಡೆಸುವಂತಲ್ಲ. ಇನ್ನೂ ಚಂದ್ರನಲ್ಲಿ ಕಾಲಿಡುವುದೆಂದರೆ ರಷ್ಯಾದಲ್ಲಿ ಕಾಲಿಟ್ಟಂತೆ ಎಂದು ಕ್ರುಶ್ಚೇವ್ ಎಚ್ಚರಿಕೆ ಇತ್ತಿದ್ದಾರೆಂಬುದಕ್ಕೆ ಆಧಾರವಿಲ್ಲವಾದರೂ ಮಧ್ಯ ಪ್ರಾಚ್ಯ ನಿಮಗಿರಲಿ ಚಂದ್ರನನ್ನ ನಮಗೆ ಬಿಟ್ಟು ಕೊಡಿ ಎಂದು ದೂರದರ್ಶಿ ವ್ಯಾಪಾರಿಗಳಾದ ಅಮೆರಿಕಾ ತೈಲ ರಾಜರು ಸೂಚಿಸಿದ್ದಾರೆ.

ಂ ಂ ಂ ಂ

ಟ್ರೇಡ್ ಒಪ್ಪಂದ ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಆಶ್ರಯದಲ್ಲಾಗಲಿ, ಭಾರತವೂ ಇದರಲ್ಲಿರಲಿ ಎಂಬಷ್ಟು ಉದಾರತನಕ್ಕೂ ಈ "ತೈಲ ರಾಜ"ರು ಇಳಿಯಲು ಸಿದ್ಧರಾಗಿದ್ದಾರಂತೆ.

ಂ ಂ ಂ ಂ

ಚಂದ್ರನನ್ನು ಮುಟ್ಟಲು ಒಂದು ರಾಕೆಟ್ ಬಿಡಲಾಗುವುದು. ಇದು ಕೆಂಪು ಭಸ್ಮ ಚೆಲ್ಲಿ ಚಂದ್ರನನ್ನು ಸಂಪೂರ್ಣ ಕೆಂಪುಗೊಳಿಸುವುದು. ಇದರಿಂದಾಗಿ ಚಂದ್ರನನ್ನು ಸೂಕ್ಷ್ಮವಾಗಿ ನೋಡಲು ಸಾಧ್ಯವಾಗುವುದೇನೋ ಎಂದು ರಷ್ಯನರು ಪ್ರಯತ್ನಿಸುತ್ತಿದ್ದಾರೆಂದು ವರದಿಯಾಗಿದೆ.

ಂ ಂ ಂ ಂ

ಅಮೆರಿಕಾ ಈಗಾಗಲೇ ರಾತ್ರಿಯಲ್ಲಿ "ಬ್ಲ್ಯಾಕ್ ಔಟ್" ಮತ್ತು ಮಾರ್ಷಲ್ ಲಾ ಜಾರಿಗೆ ಮಾಡುವ ಹವಣಿಕೆಯಲ್ಲಿದೆಯಂತೆ ರಾತ್ರಿ ಹೊತ್ತು ಕೆಂಪು ಚಂದ್ರನನ್ನು ನೋಡಿ ಅಮೆರಿಕನರೆಲ್ಲಾ ಕೆಂಪು ಮನಸ್ಕರಾದರೆ..........

ಂ ಂ ಂ ಂ

ಮೊದಲ ಉಪಗ್ರಹದಿಂದ ಹುಟ್ಟಿದ ದಿಗ್ಭ್ರಮೆ ಇನ್ನು ಅಳಿದಿಲ್ಲದಾಗಲೇ ರಷ್ಯನರು ಎರಡನೆ ಉಪಗ್ರಹ ಬಿಟ್ಟಿದ್ದಾರೆ ಈ ಗ್ರಹದಿಂದ ಗ್ರಹದೋಷ ಯಾರಿಗೂ ಇಲ್ಲವಾದರೂ ಅಮೆರಿಕನರಿಗೆ ಸ್ವಲ್ಪ ಅಂಟಬಹುದೆಂದು ನಂಬಲಾಗಿದೆ.

ಂ ಂ ಂ ಂ

ಐಕ್ ಮತ್ತು ಡಲ್ಲೆಸರ ಪ್ರತಿಯೆ ಏನಿರಬಹುದೆಂದು ರೇಡಿಯೋ ತಿರುಗಿಸಿ ಕುಳಿತವರಿಗೆ "ಬೌವ್ ಬೌವ್" ಕೇಳಿ ಬಂತಂತೆ! ರಷ್ಯನರ ಎರಡನೆ ಉಪಗ್ರಹವು ಇಷ್ಟೊಂದು ತೀವ್ರ ಪ್ರತಿಕ್ರಿಯೆಯನ್ನು ಡಲ್ಲೆಸರ ಮೇಲೆ ಉಂಟುಮಾಡಿರಬಹುದೇ? ಎಂದು ಅಚ್ಚರಿ ಪಡುವವರಿಗೆ, ಇದು ಉಪಗ್ರಹದಲ್ಲಿ ಕೂರಿಸಿ ರಷ್ಯನರು ಹಾರಬಿಟ್ಟ ನಾಯಿ ಮಾತಾಡುತ್ತಿದೆ ಎಂದು ಪ್ರಕಟಣೆ ಕೇಳಿ ಶಾಂತಿಯಾಯಿತಂತೆ!

ಂ ಂ ಂ ಂ

ನಾಯಿಯ ಮೇಲೆ ಕ್ರೌರ್ಯ ತೋರಲಾಗಿದೆ ಎಂದು ಶ್ವಾನ ಪ್ರೇಮಿಗಳೆಲ್ಲಾ ರಷ್ಯಕ್ಕೆ ತಮ್ಮ ಪ್ರತಿಭಟನೆ ಸೂಚಿಸಿದ್ದಾರೆ.

ನಮ್ಮ ಪೂರ್ವಜರಾದ ಮಂಗಗಳನ್ನು ವೈಜ್ಞಾನಿಕ ಪ್ರಯೋಗಗಲ್ಲಿ ವಿಜ್ಞಾನಿಗಳು ಬಳಸುತ್ತಿರುವಾಗ ಈ ಶ್ವಾನಪ್ರೇಮಿಗಳು ಸುಮ್ಮನಿದ್ದರೇಕೆ! ಎಂದು ವಾನರ ಪ್ರೇಮಿಗಳು ಇವರ ವಿರುದ್ಧ ಪ್ರತಿಭಟಿಸಿದ್ದಾರಂತೆ.

ಂ ಂ ಂ ಂ

ಅಲ್ಲ, ಅಲ್ಜಿರಿಯಾ ಹಾಗೂ ಸೈಪ್ರಸ್‌ನಲ್ಲಿ ಅಲ್ಲಿನ ರಾಷ್ಟ್ರೀಯ ಹೋರಾಟಕಾರರನ್ನು ನಾಯಿಗಿಂತಲೂ ಕೀಳಾಗಿ ಗುಂಡಿಕ್ಕಿ ಕೊಲ್ಲುತ್ತಿರುವಾಗ ಈ ಶ್ವಾನಪ್ರೇಮಿಗಳ ಎದೆಯಲ್ಲಿ ಮರುಕ ಹುಟ್ಟಲಿಲ್ಲವಲ್ಲಾ ?

ಬಹುಶಃ ಹೋರಾಟಕಾರರು ನಾಯಿಗಳಲ್ಲವಾದುದರಿಂದ ಈ ಶ್ವಾನಪ್ರೇಮಿಗಳು ಮೌನವಾಗಿರಬಹುದೇ ?

"ಸೂಕ್ಷ್ಮದರ್ಶಿ"

× ಸಂಕ್ಷಿಪ್ತ ಸಮಾಚಾರ ×

ಚಂದ್ರನ ಸುತ್ತ ವಿಶ್ವರಾಕೆಟ್ ಹಾರಾಟ!

ಭೂ ಉಪಗ್ರಹ ಮಾಲೆಯನ್ನು ಹಾರಿಸಿದ ತರುವಾಯ ಮುಂದಿನ ಹೆಜ್ಜೆಯಾಗಿ, ವಿಶ್ವ-'ರಾಕೇಟ್' ಒಂದನ್ನು ಚಂದ್ರನ ಸುತ್ತಲೂ ಹಾರಿಸಲಾಗುವುದೆಂದು ಪ್ರೊ. ಕ್ರೋಲ್‌ಸ್ಕಿಯವರು ಇಂದಿನ 'ಇಜ್ವೆಸ್ತಿಯಾ' ಪತ್ರಿಕೆಯಲ್ಲಿ ಬರೆಯುತ್ತಾರೆ.

ಸೋವಿಯತ್ ವಿಜ್ಞಾನಿಗಳು ವಿಕಾಸಗೊಳಿಸಿರುವ ಖಂಡಾಂತರಗಾಮಿ 'ರಾಕೆಟ್ಟ'ನೊಂದಿಗೆ ಭೂ-ಉಪಗ್ರಹವು ತುಂಬಾ ಸಾಮ್ಯವುಳ್ಳದ್ದಾಗಿದೆಯೆಂದು ಅವರು ನಿರ್ದಿಷ್ಟವಾಗಿ ತಿಳಿಸುತ್ತಾರೆ. ಅದು ಭೂಗೋಳದ ಯಾವ ಭಾಗಕ್ಕಾದರೂ ಹೋಗಬಲ್ಲುದೆಂಬ ವಾಸ್ತವಾಂಶವು, ಹಲವು ಸರಳ ಲೆಕ್ಕಾಚಾರಗಳ ಸಹಾಯದಿಂದ ಅದು ಒಂದು ಸೆಕಂಡಿಗೆ ೪ರಿಂದ ೪.೫ ಮೈಲಿಗಳಷ್ಟು ವೇಗವನ್ನು ಪಡೆಯಬಲ್ಲದೆಂಬುದನ್ನು ತೋರಿಸುತ್ತದೆ; ಇದರಿಂದ ರಷ್ಯದ ವಶದಲ್ಲಿ ಅಂತರ್ ಖಂಡ ಕ್ಷಿಪಣಿ ಇಲ್ಲವೆಂದು ಇನ್ನೂ ಆಶಿಸುವ ಅಮೆರಿಕಾಕ್ಕೆ ಹೆಚ್ಚಿನ ನಿರಾಶೆಯಾಗಿರುವುದು ಶೋಚನೀಯ!

ಉಪಗ್ರಹದ ಎಪ್ಪತ್ತೈದು ಲಕ್ಷ ಮೈಲಿಗಳ ಪ್ರಯಾಣ!

ಸೋವಿಯತ್ ವಿಜ್ಞಾನಿಗಳು ನೆಲೆಗೊಳಿಸಿದ ಪ್ರಥಮ ವಿಶ್ವ-ಪ್ರಯೋಗ ಶಾಲೆಯಾದ ಕೃತಕ-ಉಪಗ್ರಹವು ಈಗ ಚಂದ್ರಲೋಕಕ್ಕಿರುವ ದೂರದ ಮೂವತ್ತರಷ್ಟಕ್ಕಿಂತಲೂ ಹೆಚ್ಚು ದೂರದ ವರೆಗೆ ಹಾರಾಡಿದೆ. ಅಕ್ಟೋಬರ್ ೧೪ ಮತ್ತು ೨೭ರ ನಡುವೆ ಭೂಮಿಯು ಉಲ್ಕಾವೃಷ್ಟಿಗೆ ಅಡ್ಡವಾಗಿ ಸಿಕ್ಕಿಕೊಂಡು ನಾಶವಾಗದೆ ಹಾರುತ್ತಿದೆ. ಅಕ್ಟೋಬರ್ ದಿನಾಂಕ ೨೨ರಿಂದ ಇದುವರೆಗೆ ಅತ್ಯಂತ ಹೆಚ್ಚಿನ ಉಲ್ಕಾವೃಷ್ಟಿಯಾಯಿತು.

ಹತ್ತೊಂಬತ್ತು ದಿನಗಳಲ್ಲಿ ಸುಮಾರು ೭೫ ಲಕ್ಷ ಮೈಲಿ ಸುತ್ತಿ ಉಪಗ್ರಹವು ಇದುವರೆಗೆ ಅದಕ್ಕೆ ಹಾನಿಯನ್ನುಂಟು ಮಾಡಬಲ್ಲಂತಹ ಉಲ್ಕೆಯನ್ನು ಎದುರಿಸಿಲ್ಲ. ಈ ಒಂದು ವಾಸ್ತವಾಂಶವೇ ವಿಜ್ಞಾನಕ್ಕೆ ಗಣನೀಯವಾದ ಕೊಡುಗೆಯಾಗಿದೆ ದಟ್ಟವಾದ ವಿಶ್ವಕಣಗಳ ಮಧ್ಯೆ ಸೋವಿಯತ್ ವಿಶ್ವ ಪ್ರಯೋಗ ಶಾಲೆಯ ಹಾರಾಟವು ನಡೆದುದರಿಂದ, ಅದು ಉಲ್ಕಾವೃಷ್ಟಿಯ ಸ್ವರೂಪದ ಕುರಿತು ನಿರ್ವಿವಾದವಾಗಿಯೂ ಪ್ರಕಾಶವನ್ನು ಬೀರುವುದು.

ರಷ್ಯಾದಲ್ಲಿ ಜನತೆಯ ಸರಾಸರಿ ಜೀವಾವಧಿ ೬೭ ವರ್ಷಗಳು

ಸೋವಿಯತ್ ಒಕ್ಕೂಟದಲ್ಲಿ ಸರಾಸರಿ ಜೀವಿತಾವಧಿಯು ಈಗ ೬೭ ವರ್ಷಗಳಾಗಿವೆ. ಕ್ರಾಂತಿಗೆ ಮೊದಲು ಇದ್ದುದಕ್ಕಿಂತಲೂ ಈ ಸಂಖ್ಯೆಯು ರಶಿಯದಲ್ಲಿ ಇಮ್ಮಡಿಗಿಂತಲೂ ಹೆಚ್ಚಾಗಿದೆ. ವಿಪ್ಲವದ ಕಾಲದಲ್ಲಿ ಜನತೆಯ ಸರಾಸರಿ ಜೀವಿತಾವಧಿಯು ಕೇವಲ ೩೨ ವರ್ಷಗಳಾಗಿದ್ದುವು.

ವಾಂತಿಭೇದಿ (ಕಾಲರ) 'ಪ್ಲೇಗು', ಸಿಡುಬು (ಸ್ಮಾಲ್‌ಫಾಕ್ಸ್) ವಿಷಮಶೀತ ಜ್ವರ (ಟೈಫಾಯಿಡ್) ಮಲೇರಿಯ ಮೊದಲಾದ ಹಿಂದಿನ ಸಾಂಕ್ರಾಮಿಕ ಸ್ವರೂಪದ

(ಕೊನೇ ಪುಟ ನೋಡಿ)

ರೈತರಂಗ



ಪುರೋಗಾಮಿ ಭೂಸುಧಾರಣೆಗೆ ಪ್ರಾಂತಾದ್ಯಂತ ಒತ್ತಾಯ

ದಕ್ಷಿಣ ಕನ್ನಡ ಜಿಲ್ಲಾ ರೈತ ಸಂಘದ ಕಾರ್ಯಕಾರಿ ಸಮಿತಿ ಸಭೆ

ತಾ. 27—10—'57ರಂದು ದ. ಕ. ಜಿಲ್ಲಾ ರೈತ ಸಂಘದ ಕಾರ್ಯಕಾರೀ ಸಮಿತಿಯ ವಿಸ್ತೃತ ಸಭೆಯು ಶ್ರೀ ಎ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಜರಗಿತು.

ಜತ್ತಿ ಸಮಿತಿಯ ವರದಿಯಿಂದಾಗಿ ಜಿಲ್ಲೆಯ ಭೂಮ್ಹಾಲಕರು ಕೂಗೆಬ್ಬಿಸುತ್ತಿರುವುದನ್ನು ಪ್ರಸ್ತಾಪಿಸಿ ಜತ್ತಿ ಸಮಿತಿಯ ಶಿಫಾರಸುಗಳಲ್ಲಿ ಅಡಕವಾಗಿರುವ ಗಂಡಾಂತರಕಾರೀ ಅಂಶಗಳ ಬಗ್ಗೆ ಎಚ್ಚರ ವಹಿಸಬೇಕಾದುದು ಅವಶ್ಯವೆಂಬುದನ್ನು ವಿವರಿಸಿ ಕಾರ್ಯದರ್ಶಿ ಶ್ರೀ ಎಂ. ಎಚ್. ಕೃಷ್ಣಪ್ಪನವರು ವರದಿಯಿತ್ತರು. ಪ್ರಾಂತ ರೈತ ಸಂಘಟನಾ ಸಮಿತಿಯ ಸಭೆಯಲ್ಲಿ ಈ ಬಗ್ಗೆ ಕೈಗೊಳ್ಳಲಾದ ತೀರ್ಮಾನಗಳನ್ನು ಅಧ್ಯಕ್ಷರು ವಿವರಿಸಿದ ಬಳಿಕ ಶ್ರೀ ಎನ್. ಎಲ್. ಉಪಾಧ್ಯಾಯರು ಜತ್ತಿ ಸಮಿತಿಯ ಶಿಫಾರಸುಗಳನ್ನು ತಿದ್ದಿ, ಒಳ್ಳೆಯ ಕಾಯಿದೆ ಬರುವ ಸಲುವಾಗಿ ಪ್ರಾಂತ್ಯದಾದ್ಯಂತ ರೈತರು ಚಳವಳಿ ನಡೆಸುತ್ತಿರುವುದನ್ನು ವಿವರಿಸಿ, ದ. ಕ. ಜಿಲ್ಲೆಯಲ್ಲೂ ಈ ಬಗ್ಗೆ ಇಂತಹ ಪ್ರಬಲ ಚಳವಳಿಯನ್ನು ಕಟ್ಟುವ ಅವಶ್ಯಕತೆಯಿದೆಯೆಂದು ಹೇಳಿದರು. ಬಳಿಕ ಜತ್ತಿ ಸಮಿತಿ ಶಿಫಾರಸಿನ ಚರ್ಚೆ ನಡೆದು ಈ ಕೆಳಗಿನ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಭೂಮ್ಹಾಲಕ ಪದ್ಧತಿಯನ್ನು ಕೊನೆಗೊಳಿಸುವುದು ಅವಶ್ಯವೆಂದು ಹೇಳಿ ಈ ಬಗ್ಗೆ ಕೆಲವು ಪುರೋಗಾಮಿ ಸಲಹೆಗಳನ್ನು ಜತ್ತಿ ಸಮಿತಿಯು ಶಿಫಾರಸು ಮಾಡಿರುವುದನ್ನು ಈ ಸಭೆಯು ಸ್ವಾಗತಿಸುತ್ತದೆ.

ಆಪರೆ ಕುಟುಂಬ ಹಿಡುವಳಿ ಮತ್ತು ಪರಮಾವಧಿಗಳನ್ನು ಭೂಮ್ಹಾಲಕರಿಗೆ ತಮ್ಮ ಎಲ್ಲಾ ಒಕ್ಕಲುಗಳನ್ನು ಒಕ್ಕಲೆಬ್ಬಿಸಲು ಅನುಕೂಲವಾಗುವಂತೆ ನಿರ್ಣಯಿಸಿರುವುದನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ.

ಒಟ್ಟು ವಾರ್ಷಿಕ ಉತ್ಪತ್ತಿಯಾಗಿ ರೂ. 1,600 ದೊರಕುವ ಹಿಡುವಳಿಯನ್ನು ಕುಟುಂಬ ಹಿಡುವಳಿಯೆಂದು ನಿರ್ಣಯಿಸಿ ಸ್ವತಃ ದುಡಿಯುವ ಚಿಕ್ಕ ಭೂಮ್ಹಾಲಕರಿಗೆ ಒಂದು ಕುಟುಂಬ ಹಿಡುವಳಿಯ ಮಿತಿಯೊಳಗೆ ಒಕ್ಕಲಿನ ಅರೆವಾಸಿ ಭೂಮಿಯನ್ನು ಸ್ವಂತ ಸಾಗುವಳಿಗೆ ಬಿಡಿಸುವ ಶರ್ತವನ್ನಷ್ಟೇ ಇಟ್ಟು, ಗೇಣಿಯಂಶವನ್ನು ಉತ್ಪತ್ತಿಯ $\frac{1}{6}$ ಅಂಶವೆಂದು ನಿರ್ಣಯಿಸಿ, ಭೂಮ್ಹಾಲಕರಿಗೆ ಕೊಡುವ ಪರಿಹಾರವನ್ನು ಕಡಿಮೆ ಮಾಡಿ, ಕೃಷಿ ಕೂಲಿಗಾರರಿಗೆ ಕನಿಷ್ಟ ಕೂಲಿ ನಿರ್ಣಯಿಸಿ, ಮೂರು ಕುಟುಂಬ ಹಿಡುವಳಿಗಿಂತ ಮಿಕ್ಕಿರುವ ಭೂಮಿಯನ್ನು ಭೂಮ್ಹಾಲಕರಿಂದ ಸರಕಾರ ಸ್ವಾಧೀನಪಡಿಸಿ ಭೂರಹಿತರಿಗೆ ಹಂಚುವ ಇವೇ ಮೊದಲಾದ ಯೋಗ್ಯ ಅಂಶಗಳುಳ್ಳ ಒಕ್ಕಲು ಹಿತ ಮಸೂದೆ ಜಾರಿಯಾಗುವಂತೆ ಈ ಸಭೆಯು ಸರಕಾರವನ್ನು ಒತ್ತಾಯಿಸುತ್ತದೆ.

ಈ ನಿರ್ಣಯಗಳಲ್ಲದೆ ಜಿಲ್ಲೆಯ ಮುಕ್ತೇಯನರಿಗೆ (ಹೆಂಡ ತೆಗೆಯುವವರಿಗೆ) ಸಂಬಂಧಿಸಿ ಬೆಲ್ಲದ ಮುರ್ತೆಗೆ ಯಾವ ಪ್ರತಿಬಂಧವೂ ಇರಕೂಡದೆಂದು ಬೊಂಡಂತಿಲ ಮೊದಲಾದ ಕಡೆಗಳಲ್ಲಿ ಬೆಲ್ಲದ ಮುರ್ತೆಯವರ ಮೇಲೆ ಹೂಡಲಾದ ದಾವೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಸಭೆಯಲ್ಲಿ ಅಂಗೀಕರಿಸಲಾಯಿತು. ಈ ಬಗ್ಗೆ ಮುರ್ತೆಯವರ ಶಿಷ್ಟಮಂಡಳಿಯನ್ನು ಬೆಂಗಳೂರಿಗೆ ಕಳುಹಿಸಿ ಮಂತ್ರಿಗಳಿಗೆ ಮನವಿ ಅರ್ಪಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಬರುವ ನವಂಬರ ತಿಂಗಳ ಮಧ್ಯದಲ್ಲಿ ಬೆಂಗಳೂರಲ್ಲಿ ಜರಗುವ ಪ್ರಾಂತೀಯ ರೈತ ಸಮ್ಮೇಳನಕ್ಕೆ ಪ್ರತೀ ಸರ್ಕಲಿನಿಂದ ಕನಿಷ್ಟ ಇಬ್ಬರು ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವಂತೆ ಶಾಖೆಗಳಿಗೆ ಸೂಚನೆ ಕೊಡುವ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು

ಮುರ್ತೆಯವರ ಮೇಲಿನ ಅನ್ಯಾಯ ನಿಲ್ಲಲಿ

ರೈತರು ಮತ್ತು ಮುರ್ತೆಯವರು ಎದುರಿಸಬೇಕಾಗಿರುವ ಸಮಸ್ಯೆ ಹಾಗೂ ಇವರು ಸಂಘಟಿತರಾಗಬೇಕಾದ ಆವಶ್ಯಕತೆಯನ್ನು ಚರ್ಚಿಸಲು ತಾ 29-10-1957 ರಂದು ದಕ್ಷಿಣಕನ್ನಡ ಜಿಲ್ಲಾ ರೈತಸಂಘದ ಆಶ್ರಯದಲ್ಲಿ ನೀರ್ಮಾರ್ಗ ಪದವಿನಲ್ಲಿ ಸಾರ್ವಜನಿಕ ಸಭೆ ಜರಗಿತು. ಪ್ರಾರಂಭದಲ್ಲಿ ರಾಮಪೂಜಾರಿಯವರು ಸಭೆ ಕರೆದ ಉದ್ದೇಶವನ್ನು ವಿವರಿಸಿ, ಸಭೆಯ ಅಧ್ಯಕ್ಷಸ್ಥಾನವನ್ನು ಬದಿನಡಿ ಮುಂಡ ಪೂಜಾರಿಯವರು ವಹಿಸಬೇಕೆಂದು ಕೇಳಿಕೊಂಡರು.

ಅಧ್ಯಕ್ಷರ ಮೊದಲ ಮಾತಿನ ಬಳಿಕ ಶ್ರೀಗಳಾದ ಎ. ಕೃಷ್ಣಶೆಟ್ಟಿ, ಎಮ್. ಎಚ್. ಕೃಷ್ಣಪ್ಪ, ಪಡೀಲ್ ಶಿವಪ್ಪ ಪೂಜಾರಿ ಮುಂತಾದವರು ಮಾತನಾಡಿ ಮುರ್ತೆಯವರ ಮುಂದಿರುವ ಸಮಸ್ಯೆ ಮತ್ತು ಜತ್ತಿಸಮಿತಿಯು ಶಿಫಾರಸು ಮಾಡಿದ ರೈತಹಿತ ಕಾಯಿದೆಯ ಲೋಪದೋಷಗಳನ್ನು ವಿವರಿಸಿ ರೈತರಿಗೆ ನ್ಯಾಯವಾದ ಹಕ್ಕು ಸಿಗಬೇಕಾದರೆ ಸಂಘಟಿತರಾಗಿ ಮುಂದೆ ಬರಬೇಕೆಂದು ಹೇಳಿದರು.

ಬಳಿಕ ಬೊಂಡಂತಿಲ ಬೆಲ್ಲದ ಮುರ್ತೆಯವರ ಮೇಲೆ ವಿನಾಕಾರಣ ಕ್ರಿಮಿನಲ್ ದಾವೆ ಹೂಡಿದ್ದನ್ನು ಹಿಂತೆಗೆದುಕೊಳ್ಳುವಂತೆ ಸರಕಾರವನ್ನು ಒತ್ತಾಯಪಡಿಸುವ ಠರಾವು ಸಭೆಯಲ್ಲಿ ಮಂಜೂರಾಯಿತು.

ಅಧ್ಯಕ್ಷರ ಭಾಷಣದ ನಂತರ ಉಳಾಯಿ ಬೆಟ್ಟು ಬಾಬು ಬೆಳ್ಚಾಡರು ಧನ್ಯವಾದವಿತ್ತ ಬಳಿಕ ಸಭೆಯು ಮುಕ್ತಾಯವಾಯಿತು.

ಗುಲ್ಬರ್ಗ

ಜತ್ತಿ ಸಮಿತಿಯ ವರದಿಯು ನಿಜವಾಗಿ ರೈತರ ಹಿತಗಳನ್ನು ಕಾಪಾಡುವುದಿಲ್ಲವೆಂದೂ, ಕಮ್ಯೂನಿಸ್ಟ್ ಪಕ್ಷವು, ಜತ್ತಿಸಮಿತಿಗೆ ಇತ್ತ ಮನವಿಯ ಆಧಾರದ ಮೇಲೆ ಭೂಸುಧಾರಣೆಯನ್ನು ಮೈಸೂರು ಸರಕಾರ ಜಾರಿಗೆ ತರಬೇಕೆಂದೂ ನಿರ್ಣಯಗಳನ್ನು ಗುಲ್ಬರ್ಗ ಜಿಲ್ಲೆಯ ಹಲವು ಕಡೆಗಳಲ್ಲಿ ಕಿಸಾನ ಸಭಾದ ಆಶ್ರಯದಲ್ಲಿ ನಡೆದ ರೈತ ಸಭೆಗಳಲ್ಲಿ, ಸರ್ವಾನುಮತದಿಂದ ಸ್ವೀಕರಿಸಲಾಯಿತು.

ಅಷ್ಟೇ ಅಲ್ಲ, ಈಗಾಗಲೇ ಅರೆ ಕ್ಷಾಮದ ಪರಿಸ್ಥಿತಿಗೆ ಸಿಕ್ಕಿ ನೊಂದಿರುವ ರೈತರಿಂದ ಭೂಕಂದಾಯವನ್ನು ವಸೂಲಿ ಮಾಡುವ ಸರ್ಕಾರದ ಧೋರಣೆಯನ್ನು ಖಂಡಿಸಲಾಯಿತು. ಮತ್ತು ಈ ಕೂಡಲೇ ವಸೂಲಿ ಆಜ್ಞೆ ಹಿಂದೆಗೆಯಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಒಪ್ಪಲಾಯಿತು.

ಗುಲ್ಬರ್ಗಾ ಜಿಲ್ಲೆಯ ದಂಡೋತಿ, ದಿಗ್ಗಾಂವ್, ಕರ್ದಾಲ್, ಲಾಡ್ಲಾಪುರ, ನಲ್ವಾರ್, ಕಲ್ಲೂರ್, ಆನೆಕೆರಾ, ಸಿರೂರು ಮತ್ತು ಕಿಣಗಿ ಹಳ್ಳಿಗಳಲ್ಲಿ ರೈತ ಸಭೆಗಳು ಕೂಡಿತ್ತು. ಗುಲ್ಬರ್ಗ ಜಿಲ್ಲಾ ಕಾರ್ಯದರ್ಶಿಗಳಾದ ರೈತ ಸಭೆಯ ಶರಣಪ್ಪ ಭೈರಿ ಮತ್ತು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಕಾ| ಅಬ್ದುಲ್ ಕರೀಂರವರ ನೇತೃತ್ವದಲ್ಲಿ ಈ ಸಭೆಗಳನ್ನು ಜರಗಿಸಲಾಗಿತ್ತು.

ತುಮಕೂರು

ಮೈಸೂರಿನಲ್ಲಿ ಭೂಸುಧಾರಣೆ ಬಗ್ಗೆ ಜತ್ತಿಸಮಿತಿಯು ಇತ್ತ ವರದಿಯು ನಿಜವಾಗಿ ರೈತರ ಹಿತರಕ್ಷಣೆಯನ್ನು ಮಾಡುವುದರಲ್ಲಿ ಹಿಂದೆ ಬಿದ್ದಿದೆ. ದೇಶದ ಆಹಾರ ಪರಿಸ್ಥಿತಿಯ ಉತ್ಪತ್ತಿಯಲ್ಲಿ ಹೆಚ್ಚುವರಿಯಾಗಬೇಕಾದರೆ ರೈತರ ಪರಿಸ್ಥಿತಿ ಸುಧಾರಣೆಯಾಗಲೇಬೇಕು. ಈ ದಿಶೆಯಲ್ಲಿ ಜತ್ತಿ ಸಮಿತಿಯು ವರದಿ ಏನನ್ನು ಸಾಧಿಸುವುದು? ಸರಕಾರ ಭೂಸುಧಾರಣೆಯನ್ನು ತರುವಾಗ ರೈತರ ನಿಜವಾದ ಅಭಿಪ್ರಾಯಗಳೇನು? ಎಂಬುದನ್ನು ಸರ್ಕಾರದ ಗಮನಕ್ಕೆ ತರಲು ತುಮಕೂರಿನಲ್ಲಿ ನವಂಬರ 6 ಮತ್ತು 7ರಂದು, ಅಶೋಕ ರಸ್ತೆಯಲ್ಲಿರುವ ಸಾವಿತ್ರಮ್ಮನ ಛತ್ರದಲ್ಲಿ ರೈತಸಮ್ಮೇಳನ ಜರಗಲಿರುವುದು. ಜಿಲ್ಲೆಯ ಎಲ್ಲಾ ಭಾಗಗಳಿಂದ ಸುಮಾರು ಐನೂರಕ್ಕೂ ಮಿಕ್ಕಿ ಪ್ರತಿನಿಧಿಗಳು ಭಾಗವಹಿಸಿರುವರು. ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಎನ್. ಎಲ್. ಉಪಾಧ್ಯಾಯ, ಕಮ್ಯೂನಿಸ್ಟ್ ಎಂ. ಎಲ್. ಎ. ನರಸಿಂಹನ್ ಹಾಗೂ ಶ್ರೀ ಗಂಗಿರೆಡ್ಡಿಯವರು ಈ ಸಮ್ಮೇಳನದಲ್ಲಿ ಭಾಗವಹಿಸುವರು.

ಕೋಲಾರ

ಬಾಗೇಪಲ್ಲಿ ತಾಲ್ಲೂಕು, ರೈತ ಸಂಘದ ಆಶ್ರಯದಲ್ಲಿ ತಾ. 16—10—57ರಲ್ಲಿ, ಇದೇ ತಾಲ್ಲೂಕು, ಚೇಳೂರು ಹೋಬಳಿಯ ಜಲಿಬಿಗಾರಿಪಲ್ಲಿ ಮತ್ತು ರಾಮೋಜುಪಲ್ಲಿಎಂಬೆರಡು ಗ್ರಾಮಗಳಲ್ಲಿ ರೈತಸಂಘದ ಆರಂಭೋತ್ಸವಗಳನ್ನು ಜರಗಿಸಲಾಯಿತು. ತಾಲ್ಲೂಕು ರೈತ ಸಂಘದ ಅಧ್ಯಕ್ಷರೂ, ಬಾಗೇಪಲ್ಲಿ ಟೌನ್ ಮುನಿಸಿಪಲ್ ಪ್ರೆಸಿಡೆಂಟರೂ ಆದ ಕಾ| ಎ. ವಿ. ಅಪ್ಪಸ್ವಾಮಿ ರೆಡ್ಡಿ, ಕಾರ್ಯದರ್ಶಿ ಕಾ| ಡಿ. ಎಲ್. ವೆಂಕಟ ರೆಡ್ಡಿ ಮತ್ತು ತಾಲ್ಲೂಕು ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿ ಮತ್ತು ಮಾಜಿ ಚಡಿ ಪತ್ರಿಕೆಯ ಸಂಪಾದಕರಾದ ಕಾ| ಎಚ್. ಎಸ್. ರಾಮರಾವ್ ಎಂಬುವ ರೈತ ನಾಯಕರೂ, ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಅನೇಕ ಗ್ರಾಮಗಳಲ್ಲಿ ಪ್ರವಾಸ ಕೈಗೊಂಡು ಗ್ರಾಮಗಳಲ್ಲಿನ ರೈತರ ಪರಿಸ್ಥಿತಿಯನ್ನು ಸ್ವಂತವಾಗಿ ಪರಿಶೀಲಿಸಿ ಮೇಲ್ಕಂಡೆರಡು ಗ್ರಾಮಗಳಲ್ಲಿ ರೈತ ಸಂಘದ ಬಾರೀ ಬಹಿರಂಗ ಸಭೆಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಆಳುವ ಸರಕಾರದ ರೈತದ್ರೋಹಿ ನೀತಿಯನ್ನು ಖಂಡಿಸಿ, ರೈತ ಸಂಘದ ಅವಶ್ಯಕತೆಗಳನ್ನೂ, ಹಾಗೂ ಬೆಂಗಳೂರಿನಲ್ಲಿ ನಡೆಯುವ ರೈತ ಸಮ್ಮೇಳನದ ಉದ್ದೇಶವನ್ನೂ ಅದಕ್ಕೆ ಗ್ರಾಮ ರೈತ ಸಂಘಗಳ ಪ್ರತಿನಿಧಿಗಳನ್ನೂ, ಕಳಿಸಿಕೊಡುವ ಅಗತ್ಯತೆಯನ್ನು ತಿಳಿಸಿದರು.

ಜೋಡಿ ಗ್ರಾಮವಾದ ಜೋಡಿ ಮುದ್ದಲಪಲ್ಲಿ ಎಂಬ ಗ್ರಾಮದಲ್ಲಿನ ಅಪಾರ ವನಸಂಪತ್ತನ್ನು ಆಂಧ್ರದ ಜೋಡಿದಾರರು, ಗ್ರಾಮದಲ್ಲಿನ ಹುಣಿಸೆ, ತೆಂಗು, ಬೇವು, ಹೊಂಗೆ ಮರಗಳನ್ನು ಮಾರಿ, ಇದ್ದಿಲು ಸುಡಿಸಿ, ರೈತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಕಾಮ್ರೇಡರೆಲ್ಲರೂ ದೀರ್ಘ ಭಾಷಣ ಮಾಡಿ, ಜಮೀನ್ದಾರರ ಕುಟಿಲ ನೀತಿಯನ್ನು ಖಂಡಿಸಿದರು. ಈ ಕಾರ್ಯದಿಂದ, ಜಮೀನ್ದಾರಿ ನಿರ್ಮೂಲನ ಆಗುತ್ತದೆಂಬ ಭಾವನೆಯಿಂದ ರೈತರಿಗೆ ಸುಮಾರು 25 ಸಾವಿರ ರೂ. ನಷ್ಟವನ್ನು ಮಾಡುತ್ತಿರುವುದನ್ನು ಸರ್ಕಾರ ಗಮನಿಸಬೇಕಾಗಿದೆ.

ಚೇಳೂರು ಹೋಬಳಿಯಲ್ಲಿ ಅಭಾವ ಪರಿಸ್ಥಿತಿ !

ಈ ಚೇಳೂರು ಹೋಬಳಿಯಲ್ಲಿ ಸಕಾಲದಲ್ಲಿ ಮಳೆಯಾಗದೆ ಬೆಳೆಗಳೆಲ್ಲಾ ಸಂಪೂರ್ಣವಾಗಿ ನಾಶವಾಗಿರುತ್ತವೆ. ಮತ್ತು ಅನೇಕ ಸಣ್ಣ ಕೆರೆಗಳು ಬಹುಕಾಲದಿಂದ ರಿಪೇರಿಯಾಗದೆ, ಜಮೀನನ್ನು ಪಾಳುಬಿಡಲಾಗಿದೆ. ಈ ಹೋಬಳಿಯಲ್ಲಿ ಕ್ಷಾಮವೂ ಈಗಾಗಲೇ ಭೀಕರಾವಸ್ಥೆಯನ್ನು ತಾಳಿ, ಶೇಕಡ 89 ಜನ ಒಂದೇ ಹೊತ್ತು ಊಟ ಶೇ.72·9 ಜನ ಊಟಕ್ಕೆ ಇಲ್ಲದೇ ಇರುವುದನ್ನೂ, ಪರಿಶೀಲಿಸಿದರು. ಈ ಹೋಬಳಿಯನ್ನು ಸಂಪೂರ್ಣ ಕ್ಷಾಮ ಪ್ರದೇಶವೆಂದು ಪರಿಗಣಿಸಿ, ತುರ್ತು ಪರಿಹಾರ ಕಾರ್ಯವನ್ನು ಕೈಗೊಳ್ಳಲು ಸರ್ಕಾರಕ್ಕೆ ಒತ್ತಾಯವನ್ನು ಮಾಡುವ ನಿರ್ಣಯವನ್ನೂ ಸರ್ವಾನುಮತದಿಂದ ಸ್ವೀಕರಿಸಲಾಯ್ತು. ಅಲ್ಲದೆ ಕಟ್ಟಿರುವ ಮನೆಗಳನ್ನು ಕೀಳಿಸಿ ಕಳ್ಳ ಬಟ್ಟಿ ಸಾರಾಯಿಗಳನ್ನು ತಯಾರು ಮಾಡಿಸಿ, ರೈತರ ರಕ್ತವನ್ನು ಹೀರುತ್ತಿರುವ, ರೈತರನ್ನು ಜಮೀನುಗಳಿಂದ ಬಿಡಿಸುತ್ತಿರುವ, ಪುಡಾರಿತನ ಮತ್ತು ಗ್ರಾಮಗಳಲ್ಲಿನ ಶಾಂತಿಯನ್ನು ಮುರಿದು ವ್ಯಾಜ್ಯಗಳನ್ನು ಹುಟ್ಟಿಸಿ ಕೋರ್ಟಿಗೆಳೆಯುತ್ತಿರುವವರ ಸಂಖ್ಯೆಯು ಈ ಹೋಬಳಿಯಲ್ಲಿ ಕೆಲವು ಪ್ರಮುಖರ ಅನ್ಯಾಯಗಳನ್ನು ಸರ್ವಾನುಮತದಿಂದ ಖಂಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

(೮ನೇ ಪುಟ ನೋಡಿ)

ಕಾರ್ಮಿಕ ರಂಗ

ಬೀಡಿ ಮಜೂರರಿಗೆ ಕನಿಷ್ಟ ಕೂಲಿ ಸಿಗದಿದ್ದರೆ
ಬೆಂಗಳೂರಿಗೆ ಕಾಲ್ನಡೆ ಜಾಥಾ

ಅಖಿಲ ಕರ್ನಾಟಕ ಬೀಡಿ ಮಜೂರರ ಪ್ರಥಮ ಸಮ್ಮೇಳನವು ಇದೇ ತಿಂಗಳ ತಾ 25 ಮತ್ತು 26ರಂದು ಬಂಟವಾಳದಲ್ಲಿ ಶ್ರೀ ಎಂ. ಸಿ. ನರಸಿಂಹನ್, ಎಂ. ಎಲ್. ಎ.ರವರ ಅಧ್ಯಕ್ಷತೆಯಲ್ಲಿ ಜರಗಿತು.

ಕರ್ನಾಟಕದ ವಿವಿಧ ಭಾಗಗಳಿಂದ ಸುಮಾರು 140 ಪ್ರತಿನಿಧಿಗಳು ಸಮ್ಮೇಳನದಲ್ಲಿ ಹಾಜರಿದ್ದರು. ಇವರಲ್ಲಿ 15 ಮಂದಿ ಸ್ತ್ರೀಯರು. ಬಹಿರಂಗ ಸಮ್ಮೇಳನಕ್ಕೆ ನೂರಾರು ಮಂದಿ ಬೀಡಿ ಮಜೂರರೂ ಇತರ ಮಜೂರರೂ ಕಾಲ್ನಡೆಯಾಗಿಯೂ, ಸೈಕಲಿನಲ್ಲೂ, ಬಸ್ಸಿನಲ್ಲೂ ಬಂದಿದ್ದರು.

ತಾ. 25ರಂದು ಬೆಳಿಗ್ಗೆ ಶ್ರೀ ವಿಜಯಲಕ್ಷ್ಮಿ ಟಾಕೀಸಿನಲ್ಲಿ ಪ್ರತಿನಿಧಿ ಸಮ್ಮೇಳನ ಪ್ರಾರಂಭವಾಯಿತು. ಸ್ವಾಗತ ಸಮಿತಿ ಅಧ್ಯಕ್ಷರಿಂದ ಸ್ವಾಗತ ಭಾಷಣವಾದಬಳಿಕ ಶ್ರೀ ಸಿ. ಕಣ್ಣನ್, ಎಂ. ಎಲ್. ಎ. (ಕೇರಳ) ರವರು ಸಮ್ಮೇಳನವನ್ನು ಉದ್ಘಾಟಿಸುತ್ತಾ, ಕೇರಳದ ನೆರೆಪ್ರಾಂತಗಳ ಬೀಡಿ ಮಜೂರರಿಗೆ ಕನಿಷ್ಟ ಕೂಲಿ ನಿರ್ಣಯವಾಗುವುದು ಕೇರಳದ ಬೀಡಿ ಮಜೂರರ ತುರ್ತಿನ ಬೇಡಿಕೆಯಾಗಿದೆ ಎಂದರು.

ಸಮ್ಮೇಳನವು ಅಂಗೀಕರಿಸಿರುವ ಠರಾವುಗಳಲ್ಲಿ, ಸಾವಿರ ಬೀಡಿಗೆ ರೂ 2-4-0 ಮಜೂರಿ ಸಿಗಬೇಕು, ವರ್ಷದಲ್ಲಿ 10 ದಿನಗಳ ಸಂಬಳ ಸಹಿತ ಹಬ್ಬಗಳ ರಜೆ ಸಿಗಬೇಕು, ವರ್ಷದಲ್ಲಿ ಒಂದು ತಿಂಗಳ ಕನಿಷ್ಟ ಬೋನಸ್ ಸಿಗಬೇಕು, ಈ ಕೇಳಿಕೆಗಳು ತೀರ್ಮಾನವಾಗುವ ವರೆಗೆ ತಾತ್ಕಾಲಿಕವಾಗಿ ಕೂಡಲೇ ಈಗಿನ ಮಜೂರಿಯಲ್ಲಿ ನಾಲ್ಕಾಣೆ ಹೆಚ್ಚು ಸಿಗಬೇಕು. ಇಡೀ ಪ್ರಾಂತ್ಯದ ಬೀಡಿ ಮಜೂರರ ಹಿತ ರಕ್ಷಣೆಯ ಕಾನೂನೊಂದನ್ನು ಸರಕಾರ ಜ್ಯಾರಿಗೊಳಿಸಬೇಕು; ಮತ್ತು ಇಡೀ ಪ್ರಾಂತ್ಯದಲ್ಲಿ ಸಾವಿರ ಬೀಡಿಗೆ ರೂ. 2 ಗಿಂತ ಕಡಿಮೆ ಮಜೂರಿಗೆ ಯಾರನ್ನೂ ದುಡಿಸಬಾರದೆಂದು ಸರಕಾರ ಕಾನೂನು ಮೂಲಕ ವಿಧಿಸಬೇಕು ಎಂಬುದು ಮುಖ್ಯವಾದವುಗಳಾಗಿವೆ. ಬೀಡಿ ಮಜೂರರ ಈ ಕೇಳಿಕೆಗಳನ್ನು ಇನ್ನೆರಡು ತಿಂಗಳುಗಳೊಳಗಾಗಿ ಸರಕಾರ ಈಡೇರಿಸದಿದ್ದಲ್ಲಿ, ಪ್ರಾಂತ್ಯದಾದ್ಯಂತದ ಬೀಡಿ ಮಜೂರರ ಜಾಥಾಗಳು ಬೆಂಗಳೂರಿಗೆ ತೆರಳಿ ಎಸೆಂಬ್ಲಿಯ ಮುಂದೆ ಸತ್ಯಾಗ್ರಹ ನಡೆಸಲು ಸಿದ್ಧತೆ ನಡೆಸುವಂತೆ ಇಡೀ ಕರ್ನಾಟಕದ ಬೀಡಿ ಮಜೂರರಿಗೆ ಕರೆಕೊಡುವ ಇನ್ನೊಂದು ನಿರ್ಣಯವನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಗಿದೆ.

ಫೆಡರೇಷನ್ ಸ್ಥಾಪನೆ

ಕರ್ನಾಟಕ ಪ್ರಾಂತದ ಬೀಡಿ ಮಜೂರರ ಚಳುವಳಿಯನ್ನು ಕೇಂದ್ರೀಕರಿಸಿ ಮುನ್ನಡೆಸಲು ಶ್ರೀ ಎಂ. ಸಿ. ನರಸಿಂಹನ್, ಎಂ. ಎಲ್. ಎ. ಅಧ್ಯಕ್ಷರಾಗಿಯೂ, ಶ್ರೀ ಉಗ್ರಪ್ಪ ಮತ್ತು ಶ್ರೀ ಎ. ಶಾಂತಾರಾಮ ಪೈ ಉಪಾಧ್ಯಕ್ಷರುಗಳಾಗಿಯೂ, ಶ್ರೀ ಕೆ. ಮೋನಪ್ಪಶೆಟ್ಟಿ ಪ್ರಧಾನ ಕಾರ್ಯದರ್ಶಿಗಳಾಗಿಯೂ, ಶ್ರೀ ವಿ. ವೀರಪ್ಪ ಸಾಲ್ಯಾನ್ ಮತ್ತು ಶ್ರೀ ಯು. ಕೃಷ್ಣ ಜತೆಕಾರ್ಯದರ್ಶಿಗಳಾಗಿಯೂ, ಶ್ರೀ ಕೆ. ಆನಂದ ಕೋಶಾಧಿಕಾರಿಗಳಾಗಿಯೂ ಇರುವ 18 ಮಂದಿಯ ಕರ್ನಾಟಕ ಬೀಡಿ ಮಜೂರರ ಫೆಡರೇಶನನ್ನು ಚುನಾಯಿಸಲಾಗಿದೆ.

ತಾ. 36-10-57ರಂದು ಬೆಳಿಗ್ಗೆ ಪ್ರಭಾತಫೇರಿ ನಡೆದು ಶ್ರೀ ಬಿ. ಲಿಂಗಪ್ಪ ಸುವರ್ಣರು ಧ್ವಜಾರೋಹಣ ನಡೆಸಿದರು. ಸಂಜೆ ಬಡ್ಡಕಟ್ಟೆಯಲ್ಲಿ ತೋರಣಗಳಿಂದ ಅಲಂಕರಿಸಲ್ಪಟ್ಟ ಬಯಲಿನಲ್ಲಿ ಶ್ರೀ ಎಂ. ಸಿ. ನರಸಿಂಹನ್, ಎಂ. ಎಲ್. ಎ.ರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಮ್ಮೇಳನ ನಡೆಯಿತು. ಶ್ರೀ ಬಿ. ವೀರಪ್ಪ ಸಾಲ್ಯಾನರು ಸ್ವಾಗತಿಸಿದರು. ಸಮ್ಮೇಳನಕ್ಕೆ ಬಂದಿರುವ ಸಂದೇಶಗಳನ್ನು ಓದಿದ ಬಳಿಕ ಶ್ರೀ ಎ. ಕೃಷ್ಣಶೆಟ್ಟಿ, ಶ್ರೀ ಎಸ್. ಎಲ್. ಉಪಾಧ್ಯಾಯರೇ ಮೊದಲಾದವರು ಶುಭಾಶಯ ಭಾಷಣ ಮಾಡಿದರು. ಶ್ರೀ ಕೆ. ಮೋನಪ್ಪಶೆಟ್ಟರು ಪ್ರತಿನಿಧಿ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ಠರಾವುಗಳನ್ನು ವಿವರಿಸಿದರು. ಶ್ರೀ ಎ. ಶಾಂತರಾಮ ಪೈ ಮತ್ತು ಶ್ರೀ ಉಗ್ರಪ್ಪನವರು ಠರಾವುಗಳನ್ನು ಸಮರ್ಪಿಸಿ ಮಾತಾಡಿದರು.

ಅಧ್ಯಕ್ಷರು ಭಾಷಣ ಮಾಡಿ, ಬೀಡಿ ಮಜೂರರ ಪಾರಂಪರ್ಯ ಅವರು ನಡೆಸಿರುವ ಹೋರಾಟಗಳನ್ನೆಲ್ಲ ವಿವರಿಸಿ ಬೀಡಿ ಮಜೂರರ ಇಂದಿನ ಕೇಳಿಕೆಗಳು ಬಹಳ ನ್ಯಾಯವಾದುವುಗಳೆಂದರು. ಈ ಕೇಳಿಕೆಗಳನ್ನು ಸರಕಾರ ಮಾನ್ಯ ಮಾಡದೆ ಹೋದರೆ ವಿಧಾನ ಸೌಧದ ಮುಂದೆ ಸತ್ಯಾಗ್ರಹ ನಡೆಸಲಾಗುವುದೆಂದು ಸರಕಾರವನ್ನು ಎಚ್ಚರಿಸಿದರು.

—o—

ಒಪ್ಪಂದ ಜ್ಯಾರಿಗೆ ತರಲು ಉಡುಪಿ ನೇಕಾರರ ಹೋರಾಟ

1953ರಿಂದ ಉಡುಪಿಯ ನೇಕಾರರು ಸಂಬಳ ಸಹಿತ ರಜೆಯ ಹಕ್ಕನ್ನು ಕೇಳುತ್ತ ಬಂದಿರುವರಾದರೂ ಇದುವರೆಗೆ ಅವರಿಗೆ ಸಂಬಳಸಹಿತ ರಜೆ ಸಿಕ್ಕಿರಲಿಲ್ಲ. 1956 ರಲ್ಲಿ ನೇಕಾರರು ಇದನ್ನು ಕೊಡುವಂತೆ ಮಾಲಕರನ್ನು ವಿನಂತಿಸಿದರು. ಆದರೇ ಮಾಲಕರು ಸಂಬಳ ಸಹಿತ ರಜೆಯನ್ನು ಯನ್ನು ಒಪ್ಪಲು ಸಿದ್ಧರಾಗಲಿಲ್ಲ.

ತಾ. 7—10—57ರಂದು ಜರಗಿದ ನೇಕಾರರ ಸಂಘದ ಮಹಾ ಸಭೆಯಲ್ಲಿ 22-10-57ರೊಳಗಾಗಿ ಸಂಬಳ ಸಹಿತ ರಜೆಯ ಹಕ್ಕು ನೇಕಾರರಿಗೆ ದೊರೆಯದೆ ಹೋದಲ್ಲಿ ಮುಷ್ಕರ ಹೂಡುವುದಾಗಿ ತೀರ್ಮಾನಿಸಿದ ನೋಟಿಸನ್ನು ಮಾಲಕರ ಸಂಘಕ್ಕೆ ಕಳುಹಿಸಲಾಯಿತು. ಪರಿಣಾಮವಾಗಿ ಸಂಧಾನ ನಡೆದು ನೇಕಾರರಿಗೆ ರೂ 16ರಂತೆ ರಜಾ ಸಂಬಳ ಕೊಡಬೇಕೆಂದಾಯಿತು. ಸಣ್ಣಪುಟ್ಟ ಮ್ಹಾಲಕರು ಕೊಡಲನುಕೂಲವಾಗುವಂತೆ ಕಾನೂನು ಪ್ರಕಾರದಲ್ಲಿ ಹೆಚ್ಚು ಮೌಲ್ಯ ಸಿಗಬೇಕಾಗಿದ್ದರೂ ಇದನ್ನು ಬಿಟ್ಟುಕೊಟ್ಟು ನೇಕಾರರ ಸಂಘವು ರಾಜಿ ತೀರ್ಮಾನಕ್ಕೆ ಒಪ್ಪಿಗೆಯನ್ನಿತ್ತಿತ್ತು. ಆದರೇ ಸಂಧಾನ ನಡೆಯುವಾಗ ಯಾವ ಧನಿಗಳ ಪರಿಸ್ಥಿತಿಯನ್ನು ನೋಡಿ ಈ ಕನಿಷ್ಟ ಮೌಲ್ಯವಾದ ರೂ. 16-ನ್ನು ಕೊಡಲು ನಿರ್ಣಯವಾಗಿತ್ತೋ, ಇದನ್ನು ಕೊಡಲು ಕೆಲವು ಮಾಲಕರು ನಿರಾಕರಿಸುತ್ತಾ ಬಂದುದರಿಂದ ನೆಯ್ಗೆ ಮಜೂರ ಸಂಘವು ಮೊದಲೇ ತಿಳಿಸಿದಂತೆ ನೇಕಾರರು ತಾ.22-10-57ರಿಂದ, ಹೋರಾಟಕ್ಕಿಳಿದಿದ್ದಾರೆ. ತಮ್ಮ ನ್ಯಾಯದ ಹಾದಿಯಲ್ಲಿ ಊರವರ ಬೆಂಬಲ ಪಡೆದು ಸಂಬಳ ಸಹಿತ ರಜೆಯ ಹಕ್ಕನ್ನು ಪಡೆಯಲು ಉಡುಪಿಯ ನೇಕಾರರು ಹೋರಾಡುತ್ತಿದ್ದಾರೆ.

o o o o

ಕೊರಂಗ್ರಪಾಡಿ, ಉದ್ಯಾವರ, ಬೀಡಿನಗುಡ್ಡೆ, ಕುಕ್ಕಿಕಟ್ಟೆ, ಬನ್ನಂಜೆ. ಅಂಬಲಪಾಡಿಗಳಲ್ಲಿ ಪ್ರಚಾರ ಸಭೆಗಳನ್ನು ಜರಗಿಸಿ ನೇಕಾರರ ಈ ನ್ಯಾಯವಾದ ಹೋರಾಟವನ್ನು ಜಯಪ್ರದಗೊಳಿಸುವಂತೆ ಸರ್ವವಿಧದ ಸಹಾಯ ಸಹಕಾರಗಳನ್ನೀಯುವಂತೆ ವಿನಂತಿಸಲಾಯಿತು.

ಹರಿಹರ

ಕಿರ್ಲೋಸ್ಕರ ಸಂಘದ ಅಧ್ಯಕ್ಷರಾದ ಶಾಸನಸಭಾ ಸದಸ್ಯ ಎಂ. ಸಿ. ನರಸಿಂಹನ್‌ರವರ ಅಧ್ಯಕ್ಷತೆಯಲ್ಲಿ 29—19—57ರಂದು ನಡೆದ ಬಹಿರಂಗ ಸಭೆಯಲ್ಲಿ, ಬೆಂಗಳೂರಿನ ವಿಮಾನ ಕಾರ್ಖಾನೆಯ ನೌಕರರ ಬೇಡಿಕೆಗಳ ಬಗೆ ಕೇಂದ್ರ ಹಾಗೂ ಮೈಸೂರ ಸರಕಾರ ಅನುಸರಿಸುತ್ತಿರುವ ನೀತಿಯ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸುವ ಗೊತ್ತುವಳಿಯನ್ನೂ ಕಾರ್ಯನಿರತ ಪತ್ರಿಕೋದ್ಯೋಗಿಗಳ ಬಗ್ಗೆ ಪತ್ರಿಕಾ ಮಾಲೀಕರು ಅನುಸರಿಸುತ್ತಿರುವ ನೀತಿಯ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿ, ಸರಕಾರ ಈ ಬಗ್ಗೆ ಜರೂರು ಕಾರ್ಯವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ ಮತ್ತೊಂದು ಗೊತ್ತುವಳಿಯನ್ನು ಸಭೆಯಲ್ಲಿ ಒಪ್ಪಲಾಯಿತು.

ರಾಜ್ಯಾದ್ಯಂತ ಉದ್ಭವಿಸಿರುವ ಕಾರ್ಮಿಕರ ಸಮಸ್ಯೆಗಳನ್ನೂ ಬೇಗನೆ ಇತ್ಯರ್ಥ ಮಾಡಲು ಎರಡನೆಯ ಪಂಚಾಯ್ತು-ಕೋರ್ಟನ್ನು ಮೈಸೂರು ಸರಕಾರದವರು ನೇಮಿಸದಿರುವದು ಶೋಚನೀಯವೆಂದೂ ತಕ್ಷಣವೇ ಮತ್ತೊಂದು ಕೋರ್ಟನ್ನು ಸರಕಾರ ನೇಮಿಸಬೇಕೆಂದೂ ಬಹಿರಂಗ ಸಭೆಯಲ್ಲಿ ಒತ್ತಾಯಮಾಡಲಾಯಿತು.

ಹರಿಹರ ಟೌನಿನಲ್ಲಿ ನಡೆಯುತ್ತಿರುವ 'ಬೊಂಬಾಯಿ ಷೋ' ಎಂಬ ಜೂಜು ವ್ಯವಸ್ಥೆಯಿಂದ ಬಡಜನ ಮೋಸ ಹೋಗುತ್ತಿದ್ದಾರೆಂದು ಸಾರ್ವಜನಿಕರು ಒತ್ತಾಯ ಮಾಡಿಯೂ ಸಹ "ಷೋ" ನಡೆಸಲು ಜಿಲ್ಲಾಧಿಕಾರಿಗಳು ಅನುಮತಿಯಿತ್ತಿರುವದರ ಬಗ್ಗೆ ಸಭೆಯಲ್ಲಿ ವಿಷಾದ ವ್ಯಕ್ತ ಪಡಿಸಲಾಯಿತು. ಕಾರ್ಮಿಕರಾದ ಶ್ರೀವೀರಪ್ಪ ಮೇಸ್ತ್ರಿ ಮತ್ತು ರುದ್ರಪ್ಪ ಮಾತಾಡಿದರು.

ಬೆಂಗಳೂರು ಜಿಲ್ಲಾ ಮುನಿಸಿಪಲ್ ಕೆಲಸಗಾರರ ಸಮ್ಮೇಳನ

ಜಿಲ್ಲಾದ್ಯಂತದ ಮುನಿಸಿಪಲ್ ಕೆಲಸಗಾರರು ಒಂದೇ ಒಂದು ಸಂಘದ ಆಶ್ರಯದಲ್ಲಿ ಪ್ರಬಲವಾದ ಕಾರ್ಮಿಕ ಸಂಘಟನೆಯನ್ನು ಸಾಧಿಸಬೇಕೆಂಬ ಉದ್ದೇಶದಿಂದ ತಾ 27-10-57ರಂದು ಬೆಂಗಳೂರಿನಲ್ಲಿ ಮುನಿಸಿಪಲ್ ಕೆಲಸಗಾರರ ಸಮ್ಮೇಳನವೊಂದನ್ನು ಕರೆಯಲಾಗಿತ್ತು.

ಬೆಂಗಳೂರು ಕಾರ್ಪೊರೇಷನ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ, ಅದರ ಅಧ್ಯಕ್ಷರಾದ ಶ್ರೀ ಕೆ. ವಿ. ವಸಂತರ ಅಧ್ಯಕ್ಷತನದಲ್ಲಿ ಜರಗಿಸಲ್ಪಟ್ಟ ಈ ಸಮ್ಮೇಳನಕ್ಕೆ ಕಾನಕಾನ ಪುರ, ದೊಡ್ಡಬಳ್ಳಾಪುರ ಮಾಗಡಿ, ಹೊಸ್ಕೋಟೆ, ಸಾತನೂರು, ದೊಡ್ಡಹಾಳ ಹಳ್ಳಿಯ ಆರೋಗ್ಯಖಾತೆಯ ಕೆಲಸಗಾರರು ಮತ್ತು ಎಚ್. ಎ. ಎಲ್. ನ ಸ್ಯಾನಿಟರಿ ಬೋರ್ಡು ಕಾರ್ಮಿಕರ ಪ್ರತಿನಿಧಿಗಳು ಬಂದಿದ್ದರು. ಕೋಲಾರದಿಂದ ಭ್ರಾತ್ರೀಯ ಪ್ರತಿನಿಧಿಗಳೂ ಆಗಮಿಸಿದ್ದರು.

ಪ್ರತಿನಿಧಿಗಳನ್ನು ಬೆಂಗಳೂರು ಕಾರ್ಪೊರೇಷನ್ ಯೂನಿಯನ್ನಿನ ಶ್ರೀ ಶ್ರೀರಾಮುಲುರವರು ಸ್ವಾಗತಿಸಿದರು. ಜಿಲ್ಲೆಯ ಎಲ್ಲೆಡೆಗಳಲ್ಲಿ ಚದುರಿರುವ ಮುನಿಸಿಪಲ್ ಕೆಲಸಗಾರರನ್ನು ಪ್ರತಿನಿಧಿಸುವ ಕೇಂದ್ರೀಕೃತವಾದ ಒಂದು ಬಲವಾದ ಸಂಘಟನೆಯ ಆವಶ್ಯಕತೆಯನ್ನು ವಿವರಿಸಿ, ಯೂನಿಯನ್ನಿನ ಅಧ್ಯಕ್ಷ ಶ್ರೀ ಕೆ. ವಿ. ವಸಂತ್ ಹಾಗೂ ಉಪಾಧ್ಯಕ್ಷ ಶ್ರೀ ವೈ ಆರ್. ಸತ್ಯರವರು ಭಾಷಣ ಮಾಡಿದರು.

ನಿಕಟ ಭವಿಷ್ಯದಲ್ಲೇ ಜಿಲ್ಲೆಯ ಮುನಿಸಿಪಲ್ ಕಾರ್ಮಿಕರನ್ನೊಳಗೊಂಡ ಜಿಲ್ಲಾ ಸಂಘವೊಂದನ್ನು ಸ್ಥಾಪಿಸಬೇಕೆಂದೂ, ಈ ಸಂಘಕ್ಕೆ ಆಯಾಯ ಕ್ಷೇತ್ರಗಳಿಂದ ಕಮಿಟಿ ಸದಸ್ಯರನ್ನು ಚುನಾಯಿಸಬೇಕೆಂದೂ ಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು.

ಚೇಳೂರು ಹೋಬಳಿಯಲ್ಲಿ....

(೭ನೇ ಪುಟದಿಂದ)

ಜಲಿಬಿಗಾರಿಪಲ್ಲಿ ಗ್ರಾಮ ರೈತ ಸಂಘದಿಂದ ಕಾ| ವೆಂಕಟರೆಡ್ಡಿ, ನರಸಿಂಹರೆಡ್ಡಿ, ತಾಂಡ ರೈತ ಸಂಘದಿಂದ ಗೋಪೇ ನಾಯ್ಕ, ರಾಮೋಪಲ್ಲಿ ಗ್ರಾಮ ರೈತ ಸಂಘದಿಂದ ಕಾಮ್ರೇಡರಾದ ವೆಂಕಟರವಣಪ್ಪ, ಆರ್. ಬಿ. ವೆಂಕಟರೆಡ್ಡಿ, ಸುಬ್ಬಾರೆಡ್ಡಿ. ಮಾಚನಪಲ್ಲಿ ರೈತ ಸಂಘದಿಂದ ಕಾ| ಕೆ. ವೆಂಕಟ್ರಾಯಪ್ಪ, ಎಂ. ಕೆ. ವೆಂಕಟರೆಡ್ಡಿಯವರೇ ಮೊದಲಾಗಿ 8 ಜನ ರೈತ ಕಾರ್ಯಕರ್ತರನ್ನು ನವಂಬರ್ 16ರಂದು ನಡೆಯಲಿರುವ ಕರ್ನಾಟಕ ರೈತರ ಪ್ರತಿನಿಧಿ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಕಳಿಸಲು ಸರ್ವಾನುಮತದ ನಿರ್ಣಯವನ್ನು ಮಾಡಲಾಯಿತು.

ಕೋಲಾರ

ಕೋಲಾರ ಟೌನ್ ಮುನಿಸಿಪಾಲಿಟಿಯು ಯಾವ ಧ್ಯೇಯದಿಂದಲೋ ಟೌನಿನ ಕೆಲವು ಭಾಗಗಳನ್ನು ನಿರ್ಲಕ್ಷಿಸಿ ಉಳಿದ ಭಾಗಗಳಲ್ಲಿ ಮಾತ್ರ ತನ್ನ ಕರ್ತವ್ಯವನ್ನು ಚಾಚೂ ತಪ್ಪದೆ ನೆರವೇರಿಸಲು ಯತ್ನಿಸುತ್ತಿದೆ. ಕಾರಣ ಕೇಳಿದರೆ ಉತ್ತರ ದೊಡ್ಡ ಕದಾಗಿದೆ. ಆದ್ದರಿಂದ ಸಾಮಾನ್ಯ ಜನತೆಗೂ ಖಚಿತವಾಗಿ ಗೊತ್ತಾಗುತ್ತಿದೆ, ಎಲ್ಲೆಲ್ಲಿ ಕಾಂಗ್ರೆಸ್ಸಿನ ಉಮೇದುವಾರರು ಸೋತಿರುವರೋ ಅಲ್ಲೆಲ್ಲಾ ಮುನಿಸಿಪಾಲಿಟಿ ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು. ಈ ರೀತಿ ಮಾಡಿ ಆ ಭಾಗಗಳ ಜನಗಳಿಗೆ ತೊಂದರೆ ಮಾಡಿದರೆ ಅಕಸ್ಮಾತ್ ಮುಂದಿನ ಸಲವಾದರೂ ಅಲ್ಲಿ ಕಾಂಗ್ರೆಸ್ ಉಮೇದುವಾರರು ಗೆದ್ದು ಬರಬಹುದೆಂದು ಅವರ ಆಸೆಯಿರಬಹುದು. ಆದರೆ ದಿನೇ ದಿನೇ ಜನರು ಜಾಗರೂಕರಾಗುವರೇ ವಿನಹ ಅಧೋಸ್ಥಿತಿಗೆ ಇಳಿಯುವುದಿಲ್ಲವೆಂದು ಬೇರೆ ಹೇಳಬೇಕಿಲ್ಲ. ಇದನ್ನರಿತು ಈಗಲಾದರೂ ಮುನಿಸಿಪಾಲಿಟಿಯವರು ಟೌನಿನ ಎಲ್ಲಾ ಜನತೆಯೂ ಒಂದೇ ಎಂದು ಭಾವಿಸಿ ಸಮಾನ ಉಪಯೋಗಗಳನ್ನು ಮಾಡುವುದರಿಂದಲಾದರೂ ಬಂದ ಗ್ರಾಂಟುಗಳ ಸದುಪಯೋಗ ನಡೆಸಲಿ.

ಮೋಟಾರು ಕಾರ್ಮಿಕರ ವಿಜಯ

ಕೋಲಾರ ಜಿಲ್ಲಾ ಮೋಟಾರ್ ವರ್ಕರ್ಸ್ ಯೂನಿಯನ್—ಜಿಲ್ಲೆಯ ಮುಳಬಾಗಲ್ ಎಮ್. ಬಿ. ಎಸ್. ಮೋಟಾರ್ ಸರ್ವಿಸ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ನ್ಯಾಯವಾದ ಕೇಳಿಕೆಗಳನ್ನು ಮನ್ನಿಸದಿದ್ದುದರಿಂದಾಗಿ ತಾ. 18—5—57ರಲ್ಲಿ ಮುಷ್ಕರದ ನೋಟೀಸ್ ಕೊಟ್ಟಿತ್ತು. ಇದರಿಂದಾಗಿ ಕೋಲಾರ ಡಿವಿಷನ್ ಅಸಿಸ್ಟೆಂಟ್ ಲೇಬರ್ ಕಮಿಷನರ್ ಸಾಹೇಬರ ಮೊಖ್ತಾ ತಾರೀಕು 19—9—57ರ ವರೆಗೂ ಸಂಧಾನಗಳು ನಡೆದು ಅದೇ ದಿನ (ಮಂಗಳವಾರ) ಎಂ. ಬಿ. ಎಸ್. ಕಂಪೆನಿಯ ಮಾಲೀಕರಾದ ಶ್ರೀ ಅಬ್ದುಲ್ ಖಾದರ್‌ರವರು, ಯೂನಿಯನ್ ಪರವಾಗಿ ಹಾಜರಾಗಿದ್ದ ಶ್ರೀ ಮಾಣಿಕ್ಯಂ, ಪ್ರೆಸಿಡೆಂಟ್ ಕೆ. ಜಿ. ಎಫ್. ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಅಸೋಸಿಯೇಷನ್ ಮತ್ತು ಇದೇ ಅಸೋಸಿಯೇಷನ್ನಿನ ಸೆಕ್ರೆಟರಿಗಳಾದ ಎ. ಎಲ್. ಸ್ವಾಮಿ ಮತ್ತು ಮಹಮದ್ ಹನೀಫ್ ಅಲ್ಲದೆ ಕೋಲಾರ್ ಡಿಸ್ಟ್ರಿಕ್ಟ್ ಮೋಟಾರ್ ಕೆಲಸಗಾರರ ಸಂಘದ ವೈಸ್ ಪ್ರೆಸಿಡೆಂಟ್ ಜಿ. ನಾರಾಯಣಸ್ವಾಮಿ ಮತ್ತೆ ಸೆಕ್ರೆಟರಿ ಎ. ವೆಂಕಟಗಿರಿಯವರೊಂದಿಗೆ ಮೂರು ವರ್ಷಗಳ ಕಾಲ ನಡೆದುಬರುವಂತೆ ಈ ಕೆಳಕಂಡ ಬೇಡಿಕೆಗಳಿಗೆ ಒಪ್ಪಿ ಒಪ್ಪಂದವನ್ನು ಬರೆಸಿದರು:

ಕಂಪೆನಿಯಲ್ಲಿರುವ ಡ್ರೈವರುಗಳ ಸಂಬಳ 50-60 ರೂ. ಕಂಡಕ್ಟರುಗಳ 30-35, ರೂ ಕ್ಲೀನರುಗಳಿಗೆ 10-20. ರೂ. ಮತ್ತು ದಿನ ಭತ್ಯೆ ಕೂಡಿಸಿ ಸಂಬಳದ ಸ್ಕೇಲಿರಬೇಕು.

ದೂರ ಪ್ರಯಾಣ ಮಾಡುವ ಬಸ್ಸುಗಳಿಗೆ ಡಬ್ಬಲ್ ಕೆಲಸಗಾರರ ನೇಮಕ ಮತ್ತು ಆ ವೇಳೆ ಕೆಲಸಕ್ಕೆ ಹೆಚ್ಚು ಕೂಲಿ, ಪ್ರತಿಯೊಬ್ಬ ಕೆಲಸಗಾರನಿಗೂ ಒಂದು ವರ್ಷಕ್ಕೆ ಎರಡು ಜತೆ ಬಟ್ಟೆ, ಪ್ರತಿಯೊಬ್ಬ

ಪ್ರಾಂತೀಯ ಸುದ್ದಿ ಸಂಗ್ರಹ

ಕೆಲಸಗಾರನಿಗೂ ಒಂದು ತಿಂಗಳಿಗೆ 4 ದಿನ ರಜಾ ಮತ್ತು ವರ್ಷಕ್ಕೆ 10 ದಿನ ಅಸ್ವಸ್ಥ ರಜಾ, ಒಂದು ವರ್ಷಕ್ಕೆ ಮೇಲ್ಪಟ್ಟು ಸರ್ವೀಸು ಆಗಿರುವ ಪ್ರತಿಯೊಬ್ಬ ಕೆಲಸಗಾರನಿಗೂ ಸರ್ವೀಸ್ ರಿಜಿಸ್ಟರ್ ಇರಬೇಕು. ಪ್ರತಿಯೊಬ್ಬ ಕೆಲಸಗಾರನಿಗೂ ಒಂದು ತಿಂಗಳ ಸಂಬಳ ಬೋನಸ್ ಈ ವರ್ಷ ಅಕ್ಟೋಬರ್ 15ನೇ ತಾರೀಕಿನೊಳಗೆ ಕೊಡಬೇಕು ಮತ್ತೆ ಇನ್ನು ಮುಂದೆ ಈ ಬೋನಸ್ಸನ್ನು ಪ್ರತಿ ವರ್ಷದ ಡಿಸೆಂಬರ್ ತಿಂಗಳಲ್ಲಿ ಕೊಡಬೇಕು.

ಭದ್ರಾವತಿ

ಕಾರ್ಮಿಕರಿಗೆ ಕಿರುಕುಳ !

ಭದ್ರಾವತಿ ಕಬ್ಬಿಣ ಕಾರ್ಖಾನೆಯ ಕೆಲಸಗಾರರಿಗೆ ಫೋರ್‌ಮನ್, ಸೂಪರಿಂಟೆಂಡೆಂಟ್ ಮುಂತಾದ ಅಧಿಕಾರಿಗಳಿಂದ ತುಂಬಾ ಕಿರುಕುಳ ಉಂಟಾಗಿದೆಯೆಂದು ತಿಳಿದುಬಂದಿರುತ್ತದೆ.

ಕಬ್ಬಿಣ ಕಾರ್ಖಾನೆಯ 1ನೇ ಮೆಷಿನ್ ಶೆಡ್ಡಿನಲ್ಲಿ ಕೆಲಸಮಾಡುವ ಶ್ರೀ ಬಸವೋಜಿ ರಾವ್‌ರವರು 2ನೇ ಶಿಫ್ಟಿನಲ್ಲಿ ಸಂಜೆ 3ರಿಂದ 7-30 ಘಂಟೆಯ ವರೆವಿಗೆ ಬಿಡದೇ ಕೆಲಸ ಮಾಡಿದ ನಂತರ ಅವರು ಮೆಷಿನ್ನಿನ ಬಳಿ ಕುಳಿತಿದ್ದರು. ತಕ್ಷಣವೇ ಅದೇ ಶಿಫ್ಟಿನಲ್ಲಿ ಅಸಿಸ್ಟೆಂಟ್ ಫೋರ್‌ಮನ್ ಬಂದು, "ಇದು ಕುಳಿತುಕೊಳ್ಳುವ ಸ್ಥಳವಲ್ಲ, ಮನೆಗೆ ಹೋಗು" ಎಂಬುದಾಗಿ ಹೇಳಿದರು. ಅದಾದ ನಂತರ ಬಸವೋಜಿ ರಾವ್‌ರವರು ಎಷ್ಟು ತಾಳ್ಮೆಯಿಂದ ಕೇಳಿಕೊಂಡರೂ ಫಲವಾಗಲಿಲ್ಲ. ಆ ಮೇಲೆ ಅಸಿಸ್ಟೆಂಟ್ ಫೋರ್‌ಮನ್ ಶ್ರೀ ಬಸವೋಜಿ ರಾವ್‌ರವರನ್ನು ವಾಚ್‌ಮ್ಯಾನ್ ಮುಖಾಂತರ ಹೊರಗೆ ಹಾಕಿಸಲು ಹೋದರು. ಈ ಮಧ್ಯೆ ತುಂಬಾ ಕೆಲಸಗಾರರು ಬಂದು, ವಾಚ್‌ಮ್ಯಾನ್‌ನಿಂದ ಬಸವೋಜಿ ರಾವ್‌ರವರನ್ನು ಬಿಡಿಸಿದರು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೂ ಮತ್ತು ಕೂಲಿಗಾರ ಸಂಘಕ್ಕೂ ದೂರು ಕೊಟ್ಟಿರುವುದಾಗಿ ತಿಳಿದುಬಂದಿರುತ್ತದೆ.

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ದಬ್ಬಾಳಿಕೆಯು ಇತ್ತೀಚಿಗೆ ಅಧಿಕವಾಗುತ್ತಿದೆ. ಮ್ಯಾನೇಜ್‌ಮೆಂಟಿನ ಈ ಅಧಿಕಾರಶಾಹಿ ವರ್ತನೆ ನಿಲ್ಲಬೇಕು.

(೨ನೇ ಪುಟದಿಂದ)

ಗಿತ್ತಷ್ಟೆ! ಪೋಲೀಸರ ಈ ಅಕ್ರಮ ಮತ್ತು ಅನ್ಯಾಯಗಳ ಬಗ್ಗೆ ಕೂಡಲೇ ಡಿ. ಎಸ್. ಪಿ.ಯವರು ವಿಚಾರಣೆ ಮಾಡಬೇಕೆಂದು ಕೋರಲಾಗಿದ್ದು ಡಿ. ಎಸ್. ಪಿ. ಯವರು ತಮಗೆ ಬಂದ ಟೆಲಿಗ್ರಾಂಗನುಸಾರವಾಗಿ, ಸ್ಥಳಕ್ಕೆ ತೆರಳಿ, ವಿಚಾರಣೆ ನಡೆಸಿ, ಸಂಬಂಧಪಟ್ಟ ಇಬ್ಬರು ಪೋಲೀಸರನ್ನು ಮತ್ತು ಡ್ಯೂಟಿರೈಟರೊಬ್ಬನನ್ನು ವರ್ಗಾಯಿಸಿದ್ದಾರೆ. ಇದು ಇತರ ಪೋಲೀಸರಿಗೂ, ಅಧಿಕಾರಿಗಳಿಗೂ ಮುನ್ನೆಚ್ಚರಿಕೆಯಾಗಿ ಪರಿಣಮಿಸುವುದೆಂದು ನಂಬಿದ್ದೇನೆ.

ಕಮ್ಯೂನಿಸ್ಟರ ಮೇಲೆ ಪೋಲೀಸರ ವಕ್ರದೃಷ್ಟಿ

ಪಾವಗಡ ಕಮ್ಯೂನಿಸ್ಟ್ ಪಕ್ಷದ ತಾಲೂಕು ಸಮಿತಿಯ ಸದಸ್ಯರಾದ ಕಾ। ಅಬ್ದುಲ್ ವಹಾಬ್‌ಸಾಬ್‌ರವರ ಮನೆಯವರನ್ನು ಗದರಿಸಿ, ಹೆದರಿಸಿ, ಪೋಲೀಸರು ಸುಂಬಾ ಕಿರುಕುಳ ಕೊಡುತ್ತಿದ್ದಾರೆಂದು ವರದಿಯಾಗಿದೆ. 21-10-57 ರಾತ್ರಿ ವಹಾಬ್‌ಸಾಬ್‌ರವರ ತಂದೆಯವರನ್ನು ಕಂಡು ನಂಬ್ರ 71ನೇ ದಫೆದಾರ ನಿಮ್ಮ ಮಗನನ್ನು ಅರೆಸ್ಟು ಮಾಡುತ್ತೇನೆ ಎಂದು ಭಯೋತ್ಪಾದನೆ ಮಾಡಿದ್ದುದು ತಿಳಿದು ಬಂದಿದೆ. ಅಲ್ಲದೆ ಅಲ್ಲಿನ ರೈತಾಪಿಗಳು ಕಮ್ಯೂನಿಸ್ಟ್ ಪಕ್ಷದ ಮೇಲೆ ಅಭಿಮಾನ ತಾಳಿದವರಾಗಿದ್ದು, ಅವರಿಗೆ ದಿನಾ ಪೋಲೀಸರು ಕಿರುಕುಳ ಕೊಡುತಿದ್ದಾರೆಂದು ನಮ್ಮ ಗಮನಕ್ಕೆ ಬಂದಿದೆ.

ರೈತಸಮ್ಮೇಳನ ಸಂಬಂಧವಾಗಿ ಪ್ರಚಾರ ಹಾಗೂ ನಿಧಿಸಂಗ್ರಹಕ್ಕಾಗಿ ಕಾರ್ಯಕರ್ತರು ತೆರಳಿದ್ದಾಗ ಪೋಲೀಸನೊಬ್ಬನು, ರೈತರನ್ನು ಗದರಿಸಿ, ನಿಧಿಗೆ ಹಣ ಕೊಡದಂತೆ ಮಾಡಿದ್ದಾನೆ. ಪೋಲೀಸು ಮೇಲಧಿಕಾರಿಗಳು ಪೋಲೀಸರಿಗೆ ಹೀಗೆ ನಡೆದುಕೊಳ್ಳಲು ಸೂಚನೆ ಇತ್ತಿದ್ದಾರೆಯೇ? ಅಥವಾ ನಮ್ಮ ಕಾಂಗ್ರೆಸ್ ಪೋಲೀಸು ಮಂತ್ರಿ ಪೂಣಚ್ಚರು ಪೋಲೀಸರು ಕಮ್ಯೂನಿಸ್ಟ್ ಪಕ್ಷದ ಬಗ್ಗೆ ಈ ಧೋರಣೆ ತಳೆಯಬೇಕೆಂದು "ಹೊಸ ವರ್ತನೆಗಳ ನಿರೂಪಣೆ ಸದ್ಯಕ್ಕೆ ಮಾಡಿಲ್ಲವಷ್ಟೆ!

● ತಾರೀಕು 20-10—57ರ ಸಂಜೆ ತುಮಕೂರು ಮುನಿಸಿಪಲ್ ಮಾರ್ಕೆಟ್ ವ್ಯಾಪಾರಿಗಳ ಸಭೆಯು ಕೃಷ್ಣರಾಜೇಂದ್ರ ಮಾರ್ಕೆಟ್ಟಿನಲ್ಲಿ ಟಿ. ಎಲ್. ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ. ಸೇರಿ ದಿನನಿತ್ಯದ ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು "ತುಮಕೂರು ಮುನಿಸಿಪಲ್ ಮಾರ್ಕೆಟ್ ವ್ಯಾಪಾರಿಗಳ ಸಂಘವನ್ನು ಸ್ಥಾಪಿಸಲಾಯಿತು ಇದರ ಅಂಗವಾಗಿ ಶ್ರೀ ಟಿ. ಆರ್. ರೇವಣ್ಣ, ಶ್ರೀ ಕೆ. ಆರ್. ನಾಯಕ ಶ್ರೀ ಟಿ. ಎಲ್. ತಿಮ್ಮಪ್ಪ ಇವರುಗಳನ್ನೊಳಗೊಂಡ ಹದಿಮೂರು ಜನದ ಕಾರ್ಯಕಾರೀ ಸಮಿತಿ ಒಂದನ್ನು ರಚಿಸಿ, ಆಡಳಿತ ವರ್ಗವನ್ನೂ ಆರಿಸಲಾಯಿತು.

—೦—

ಕರ್ನಾಟಕ ರೈತರ ಪ್ರತಿನಿಧಿ ಸಮ್ಮೇಳನ

ಕರ್ನಾಟಕದ ರೈತರನ್ನೆದುರಿಸುತ್ತಿರುವ ಸಮಸ್ಯೆಗಳನ್ನು ಮತ್ತು ಭೂಸುಧಾರಣೆ ಬಗ್ಗೆ ಜತ್ತಿ ಸಮಿತಿಯು ಇತ್ತ ವರದಿಯನ್ನು ಚರ್ಚಿಸಲು, ತಿಂಗಳ ತಾ. 16-17ರಂದು ಬೆಂಗಳೂರು ಕಾರ್ಪೋರೇಷನ್ ಆಫೀಸು ಹಿಂದುಗಡೆಯಲ್ಲಿರುವ ದೇವಾಂಗ ಸಂಘ ಚತ್ರದಲ್ಲಿ ಕರ್ನಾಟಕ ರೈತರ ಪ್ರತಿನಿಧಿ ಸಮ್ಮೇಳನವನ್ನು ಕರೆಯಲಾಗಿದೆ.

ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎನ್. ಪ್ರಸಾದ್ ರಾವ್‌ರವರು ಸಮ್ಮೇಳನದಲ್ಲಿ ಭಾಗವಹಿಸುವರು.

ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಬರುವವರು ರೂ. 2ನ್ನು ಪ್ರತಿನಿಧಿ ಶುಲ್ಕವನ್ನಾಗಿ ನೀಡಬೇಕಾಗಿದೆ. ಪ್ರತಿನಿಧಿಗಳ ಎರಡು ದಿನಗಳ ಊಟದ ಖರ್ಚನ್ನು ನೋಡಲಾಗುವುದು.

ಓದುಗರ ಓಲೆ

ಸ್ವಾಮಿ,

ತಾ. 15-10-57ನೇ ಮಂಗಳವಾರ ಈ ಸಬ್ ಡಿವಿಜನ್‌ನಲ್ಲಿ ಬಹಳ ದೊಡ್ಡ ಮನುಷ್ಯರೆನಿಸಿಕೊಂಡಿರುವ ಕಾಂಗ್ರೆಸ್ ಪುಡಾರಿ ಮಾಲಿ ಮರಿಯಪ್ಪರವರು ಜೋಡಿ ವೆಂಗಳಮ್ಮನ ಹಳ್ಳಿ ದಂಡಯಾತ್ರೆ ಮಾಡಿದರು. ಇವರಿಗೆ ಕುಚೇಷ್ಟೆ, ಕುಯುಕ್ತಿ, ಕುತಂತ್ರ ಇತ್ಯಾದಿಗಳಲ್ಲಿ ಬಹಳ ಚುರುಕಾದ ಜ್ಞಾನವಿದೆ. ವೆಂಗಳಮ್ಮನ ಹಳ್ಳಿ ರೈತರ ಹೋರಾಟ ಮುರಿಯಲಿಕ್ಕೆ ಸುತ್ತ ಮುತ್ತ ಹಳ್ಳಿಗಳಲ್ಲಿ ಪಾರ್ಟಿಮಾಡಿ ಗುಲ್ಲೆಬ್ಬಿಸುವುದಲ್ಲದೆ, ಪೋಲೀಸಿನವರನ್ನು ಮತ್ತು ಈ ತಾಲ್ಲೂಕಿನ ಅಮಲ್ದಾರರನ್ನು ತಮ್ಮ ಮನೆ ಆಳುಗಳಂತೆ ಬಳಸಿಕೊಂಡು ಈ ವ್ಯವಹಾರದಲ್ಲಿ ಕೈಹಾಕಿ ಜೋಡಿದಾರ್ ಸುಬ್ಬರಾವ್ ಏಜಂಟಾಗಿ ರೈತರನ್ನು ಸದೆಬಡಿದು ಇನ್ನು ರೈತರು ಕ್ಷೀಣಿಸುವಂತೆ ಏರ್ಪಾಟುಗಳನ್ನು ನಡೆಸುತ್ತಿದ್ದಾರೆ.

ಇವರು ಅಮಲ್ದಾರರನ್ನು ಯಾವ ಕಾರಣವೂ ಇಲ್ಲದೆ ಬೇಜವಾಬ್ದಾರಿಯಾಗಿ ತನ್ನ ಹಿಂದೆ ಕರೆದುಕೊಂಡು ರೈತರನ್ನು ಬೆದರಿಸಲು ಪ್ರಯತ್ನಪಟ್ಟದ್ದು ಏತಕ್ಕಾಗಿ? ಅಮಲ್ದಾರರಿಗೆ 15-10-57ನೇ ದಿನ ಹಡಾವುಡಿಯಾಗಿ ರೈತರನ್ನು ಬೆದರಿಸಲಿಕ್ಕೆ ಸರ್ಕಾರ ನೇಮಿಸಿದೆಯೆ? ಮಾಲಿ ಮರಿಯಪ್ಪನವರು ವಿವೇಕದಿಂದ ವರ್ತಿಸಿ ತಮ್ಮ ನಡವಳಿಕೆಯನ್ನು ತಿದ್ದಿಕೊಳ್ಳಲು ಕಾಂಗ್ರೆಸ್ಸು ಸಂಸ್ಥೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೆಂದು ಆಶಿಸೋಣವೇ?

"ಓರ್ವ ರೈತ"

ಮಾನವ ಕಲ್ಯಾಣಕ್ಕಾಗಿ ಶಾಂತಿ ಅಗತ್ಯ !

(ಮಧ್ಯದ ಪುಟದಿಂದ)

ಸೋವಿಯತ್ ಯೂನಿಯನ್ ವಹಿಸಿದ ಪಾತ್ರ ಇದಕ್ಕೆ ನಿದರ್ಶನವಾಗಿದೆ. ಜರ್ಮನಿಯ ಪುನರ್ ಐಕ್ಯತೆಗಾಗಿ ಅನೇಕ ಅಮೂಲ್ಯವಾದ ಸಲಹೆಗಳನ್ನು ಮುಂದಿರಿಸಿದೆ. ಆದರೆ ಯುದ್ಧಕೋರರಾದ ಸಾಮ್ರಾಜ್ಯಶಾಹಿಗಳು ಒಂದೊಂದನ್ನೂ ನಿರಾಕರಿಸುತ್ತಿದ್ದಾರೆ. ಜಿನೀವಾ ಚತುರ್‍ರಾಷ್ಟ್ರ ಅಗ್ರಪತಿಗಳ ಸಮಾವೇಶದಲ್ಲಿ ಸೋವಿಯತ್ ರಷ್ಯದ ಪಾತ್ರ ಅಂತರರಾಷ್ಟ್ರೀಯ ಸಮಸ್ಯೆಗಳ ಮೇಲೆ ಅದಕ್ಕಿರುವ ಶಾಂತಿಯುತ ಭಾವನೆಯನ್ನು ತೋರಿಸಿದೆ ನಿಶ್ಶಸ್ತ್ರೀಕರಣವೊಂದೇ ಚಿರಶಾಂತಿಗೆ ಹಾದಿಯೆಂದು ಘೋಷಿಸಿ ಸೋವಿಯತ್ ಸರಕಾರವು ಅದಕ್ಕಾಗಿ ಶ್ರಮಿಸುತ್ತಿದೆ. ಅಣು ಹಾಗೂ ಜಲಜನಕ ಬಾಂಬಿನಂಥ ಮಾರಕಾಸ್ತ್ರಗಳನ್ನು ನಿಶ್ಶರ್ತವಾಗಿ ನಿರ್ಬಂಧಿಸಬೇಕೆಂದೂ, ಅಂತರರಾಷ್ಟ್ರೀಯ ಹತೋಟಿಯನ್ನು ಏರ್ಪಡಿಸಬೇಕೆಂದೂ ಘೋಷಿಸುತ್ತಿದೆ. ನಿಶ್ಶಸ್ತ್ರೀಕರಣ ಸಾಧನೆಗೆ ಅನೇಕ ಅಮೂಲ್ಯ ಸಲಹೆಗಳನ್ನು ಮುಂದಿರಿಸಿರುವುದೇ ಅಲ್ಲದೆ, ತನ್ನ ಮಿಲಿಟರಿ ವೆಚ್ಚವನ್ನು ಕ್ರಮೇಣ ತಗ್ಗಿಸುತ್ತಿದೆ, ಸೈನ್ಯವನ್ನು ಕಡಿಮೆಮಾಡುತ್ತಿದೆ. ಸಾಮ್ರಾಜ್ಯವಾದಿಗಳು ತಾವು ಮುಂದಿರಿಸಿದ್ದ ಸಲಹೆಗಳನ್ನೇ ಕೈಬಿಟ್ಟು ನಿಶ್ಶಸ್ತ್ರೀಕರಣ ಒಪ್ಪಂದ ಆಗದಂತೆ ಅಡ್ಡಿ ಆತಂಕಗಳನ್ನು ತಂದೊಡ್ಡುತ್ತಿವೆ. ನಿಶ್ಶಸ್ತ್ರೀಕರಣಕ್ಕಾಗಿ ಒಂದೆಡೆ ಮಾತುಕತೆ ನಡೆಸುತ್ತ ಸಾಮ್ರಾಜ್ಯಶಾಹೀ ದೇಶಗಳು ಜರ್ಮನಿಯನ್ನು ಪುನಶ್ಶಸ್ತ್ರೀಕರಣ ಮಾಡುತ್ತಿವೆ. ನಿಶ್ಶಸ್ತ್ರೀಕರಣದ ಬಗ್ಗೆ ಸಂಧಾನವನ್ನು ಉದ್ದೇಶಪೂರ್ವಕವಾಗಿಯೇ ಸಾಮ್ರಾಜ್ಯಶಾಹಿಗಳು ಅನಿರ್ದಿಷ್ಟವಾಗಿ ಮುಂದುವರಿಸಿಕೊಂಡು ಹೋಗುತ್ತಿವೆ.

ವಿಶ್ವಸಂಸ್ಥೆಯಲ್ಲಿ....

ವಿಶ್ವಸಂಸ್ಥೆಯ ಶಾಶ್ವತ ಪ್ರತಿನಿಧಿಯಾಗಿ ಸೋವಿಯತ್ ಯೂನಿಯನ್ ಶಾಂತಿಗಾಗಿ ವಸಾಹತು ದೇಶಗಳ ಬಂಧವಿಮೋಚನೆಗಾಗಿ, ಸಾಮ್ರಾಜ್ಯಶಾಹಿಗಳ ಯುದ್ಧ ಹಂಚಿಕೆ ಮತ್ತು ಕುತಂತ್ರಗಳ ವಿರೋಧವಾಗಿ ಹೋರಾಡುತ್ತಿದೆ. ಮುದ್ರೆಯೊತ್ತುವಂಥ ಬಹುಮತವನ್ನು ಅಮೆರಿಕಾ ಮತ್ತು ಇತರ ಸಾಮ್ರಾಜ್ಯವಾದೀ ದೇಶಗಳು ವಿಶ್ವಸಂಸ್ಥೆಯಲ್ಲಿ ಪಡೆದಿದ್ದರೂ ಕಳೆದ 11 ವರ್ಷಗಳಲ್ಲಿ ಸೋವಿಯತ್ ಯೂನಿಯನ್ ಸತತವಾಗಿ ತನ್ನ ನಿಲುಮೆಯನ್ನು ಧೈರ್ಯದಿಂದ ಎತ್ತಿ ಹಿಡಿದಿದೆ. ಜನತಾ ಚೀಣಕ್ಕೆ ನ್ಯಾಯವಾದ ಸ್ಥಾನ ಸಲ್ಲಬೇಕೆಂದು ಹೋರಾಟವನ್ನು ನಡೆಸುತ್ತಿದೆ. ಅಮೆರಿಕನ್ ಸಾಮ್ರಾಜ್ಯಶಾಹಿಗಳ ಎಲ್ಲ ಕುತಂತ್ರಗಳನ್ನೂ ಅನ್ಯಾಯಗಳನ್ನೂ ಬಯಲಿಗೆಳೆಯುತ್ತಿದೆ. ಕಾಶ್ಮೀರದ ಪ್ರಶ್ನೆಯಲ್ಲಿ ಸೋವಿಯತ್ ಯೂನಿಯನ್ ನಿರ್ವಹಿಸಿರುವ ಪಾತ್ರ ಭಾರತೀಯರಾದ ನಮಗೆ ಚಿರಪರಿಚಿತವಾಗಿದೆ. ದಕ್ಷಿಣ ಆಫ್ರಿಕಾದ ವರ್ಣಭೇದದ ನೀತಿಯ ಬಗ್ಗೆ, ಅಲ್ಜೀರಿಯಾ ಪ್ರಶ್ನೆಯ ಬಗ್ಗೆ, ಮಧ್ಯಪ್ರಾಚ್ಯ ಹಾಗೂ ದೂರಪ್ರಾಚ್ಯದ ಬಗ್ಗೆ, ಸೋವಿಯತ್ ಯೂನಿಯನ್ ವಿಶ್ವಸಂಸ್ಥೆಯಲ್ಲಿ ನಿರ್ವಹಿಸಿರುವ ಪಾತ್ರ ಅತ್ಯಂತ ಹಿರಿಯದಾಗಿದೆ. ನಿಜವಾಗಿ ಶಾಂತಿಯನ್ನು ಬಯಸುತ್ತಿರುವವರು ಯಾರು ಎಂಬುದನ್ನು ಸೋವಿಯತ್ ಯೂನಿಯನ್ ಎತ್ತಿ ತೋರಿಸಿದೆ.

ಪ್ರಸಕ್ತ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ

ಶಾಂತಿ ಹೋರಾಟದಲ್ಲಿ ಸೋವಿಯತ್ ಯೂನಿಯನ್ ಇಂದು ಏಕಾಂಗಿಯಾಗಿಲ್ಲ. ಸೋವಿಯತ್ ರಷ್ಯದೊಂದಿಗೆ ಇಂದು ಇಡೀ ಸಮಾಜವಾದೀ ವಿಶ್ವ ಪ್ರಪಂಚದ ಮೂರರಲ್ಲೊಂದು ಭಾಗವನ್ನಾಕ್ರಮಿಸಿಕೊಂಡಿದೆ. ವಿಶ್ವಶಾಂತಿಗಾಗಿ ಹೋರಾಟದಲ್ಲಿ ಶ್ರಮಿಸುತ್ತಿರುವ ಸಮಾಜವಾದೀ ಜಗತ್ತಿನೊಂದಿಗೆ ಭಾರತ, ಬರ್ಮಾ, ಇಂಡೋನೇಷಿಯಾ, ಈಜಿಪ್ಟ್ ಮೊದಲಾದ ಅನೇಕ ಸ್ವತಂತ್ರ ರಾಷ್ಟ್ರಗಳೂ ಸೇರಿವೆ. ಶಾಂತಿಯುತ ಸಹಬಾಳ್ವೆಯ ನೀತಿಯನ್ನು ಒಪ್ಪಿಕೊಂಡು ಶಾಂತಿಗಾಗಿ ಶ್ರಮಿಸುತ್ತವೆ. ಏಷ್ಯಾ ಮತ್ತು ಆಫ್ರಿಕಾದ ತಟಸ್ಥ ರಾಷ್ಟ್ರಗಳು ಇಂದು ಶಾಂತಿಗಾಗಿ, ಸ್ವಾತಂತ್ರ್ಯ ರಕ್ಷಣೆಗಾಗಿ, ವಸಾಹತು ನೀತಿಯ ವಿರೋಧವಾಗಿಹೋರಾಡುತ್ತಿದೆ. ಎಂದಿಗಿಂತಲೂ ಅಧಿಕವಾಗಿ ಇಂದು ಶಾಂತಿಯು ಸಾಧಿಸಬಹುದಾದ ಭವಿಷ್ಯತ್ತಾಗಿದೆ.

ಸಾಮ್ರಾಜ್ಯಶಾಹಿಗಳು ಮಧ್ಯಪ್ರಾಚ್ಯದಲ್ಲಿ ಇಂದು ಯುದ್ಧದ ಕಿಡಿಯನ್ನು ಹೊತ್ತಿಸಲು ಯತ್ನಿಸುತ್ತಿದ್ದಾರೆ. ಈಜಿಪ್ಟಿನ ಮೇಲೆ ಆಕ್ರಮಣ ನಡೆಸಿ ವಿಫಲಗೊಂಡ ಸಾಮ್ರಾಜ್ಯವಾದಿಗಳು ಈಗ ಟರ್ಕಿಯನ್ನು ಎತ್ತಿಕಟ್ಟಿ ಸಿರಿಯಾದ ಮೇಲೆ ಧಾಳಿ ನಡೆಸಿ ಮೂರನೆಯ ಮಹಾಯುದ್ಧಕ್ಕೆಡೆಗೊಡಲು ಯತ್ನಿಸುತ್ತಿದ್ದಾರೆ. ಐಸನ್‌ಹೋವರ್ ತತ್ವವನ್ನು ತಂದು, ಅರಬ್ ದೇಶಗಳಲ್ಲಿ ಗೊಂದಲ ಹೆಚ್ಚಿ ಶಾಂತಿ ಕದಡಲು ಯತ್ನಿಸುತ್ತಿದ್ದಾರೆ. ಆದರೆ ಅವರ ಈ ಯತ್ನ ವಿಫಲಗೊಳ್ಳುವುದು ಖಂಡಿತ. ವಿಶ್ವಶಾಂತಿಗಾಗಿ ಶ್ರಮಿಸುತ್ತಿರುವ ಅಪಾರವಾದ ಸೇನೆಯ ವಿರುದ್ಧ ಸಾಮ್ರಾಜ್ಯವಾದಿಗಳ ಆಟ ಇಂದು ಸಾಗದಾಗಿದೆ

ಸೋವಿಯತ್ ಯೂನಿಯನ್ ಇಂದು ವಿಜ್ಞಾನದಲ್ಲಿ ಅದ್ಭುತವಾದ ಪ್ರಗತಿಯನ್ನು ಸಾಧಿಸಿ ವಿಶ್ವವನ್ನೇ ತಲ್ಲಣಗೊಳಿಸಿದೆ. ಅಮೆರಿಕಾವನ್ನು ಬಹು ದೂರ ಹಿಂದುಳಿಸಿ, ಖಂಡಾಂತರ ಕ್ಷಿಪಣಿ, ಭೂ-ಉಪಗ್ರಹ ಮೊದಲಾದವುಗಳನ್ನು ತಯಾರಿಸಿ ಯಶಸ್ವಿಯಾಗಿ ಪ್ರಯೋಗಿಸಿದೆ. ಸಾಮ್ರಾಜ್ಯಶಾಹಿಗಳ ಮೇಲುಗೈಯನ್ನು ಮುರಿದಿದೆ. ವೈಜ್ಞಾನಿಕವಾಗಿ ಪ್ರಗತಿಯನ್ನು ಸಾಧಿಸಿದ್ದರೂ, ಹೊಸ ಹೊಸ ಅಸ್ತ್ರಗಳನ್ನು ಪಡೆದಿದ್ದರೂ ಸೋವಿಯತ್ ಯೂನಿಯನ್ ಶಾಂತಿಗಾಗಿ ತನ್ನ ಹಸ್ತವನ್ನು ನೀಡಿದೆ, ಅದಕ್ಕಾಗಿ ಒಪ್ಪಂದಕ್ಕೆ ಬರಲು ಯತ್ನಿಸುತ್ತಿದೆ. ಸೋವಿಯತ್ ರಷ್ಯದ ಮೇಲೆ ಷರತ್ತುಗಳನ್ನು ಹಾಕಿ ತಾವು ಒಪ್ಪಂದಕ್ಕೆ ಬರಲು ಶಕ್ತಿ ಕೇಂದ್ರಗಳ ನೀತಿಯನ್ನನುಸರಿಸುತ್ತಿರುವ ಸಾಮ್ರಾಜ್ಯಶಾಹಿಗಳ ಯತ್ನಕ್ಕೆ ಇಂದು ಭಂಗ ಬಂದಿದೆ. ಸಮಾಜವಾದೀ ಜಗತ್ತು ಅಪಾರವಾಗಿ ಮುನ್ನಡೆದಿರುವುದರಿಂದ ಇಂದು ಶಾಂತಿಯ ಭವಿಷ್ಯತ್ತು ಅದ್ಭುತವಾಗಿ ಹೆಚ್ಚಿದೆ.

ನಲವತ್ತು ವರ್ಷಗಳಿಂದಲೂ ಶಾಂತಿಗಾಗಿ ಶ್ರಮಿಸುತ್ತಿರುವ, ಎರಡು ಮಹಾಯುದ್ಧದ ವಿನಾಶದ ಅನುಭವವನ್ನು ಪಡೆದಿರುವ ಸೋವಿಯತ್ ಜನತೆ ಶಾಂತಿಯನ್ನು ಎಲ್ಲರಿಗಿಂತಲೂ ಹೆಚ್ಚಾಗಿ ಬಯಸುತ್ತಿದೆ. ಸೋವಿಯತ್ ಯೂನಿಯನ್ನಿನ ಶಾಂತಿ ಬಯಕೆ ಹಾಗೂ ಯತ್ನಗಳು ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ. ಎಲ್ಲ ದೇಶಗಳ ಪ್ರಜಾಪ್ರಭುತ್ವವಾದೀ ಶಾಂತಿಪ್ರಿಯ ಜನತೆಯು ಈ ಹೋರಾಟಕ್ಕೆ ಬೆನ್ನೆಲುಬಾಗಿದೆ.

ಶಾಂತಿಯ ಉಗ್ರ ಪ್ರತಿಪಾದಕ ರಷ್ಯಾ

—ರೋಬ್ಸನ್

(೬ನೇ ಪುಟದಿಂದ)

ನಾನೂ ಮನುಷ್ಯನೆಂದು ಪರಿಗಣಿಸಿದೆ, ಇದು ಸತ್ಯ ಸಂಗತಿ.

"ಹೀಗಿರುವಾಗ ತಮಗೆ ತಿಳಿಯದ ಜನರಾದ, ರಷ್ಯನರನ್ನು ದ್ವೇಷಿಸಿ ಎಂದು ಈಸ್ಟ್‌ಲ್ಯಾಂಡ್ ನೀಗ್ರೋಗಳಿಗೆ ಹೇಳುವಾಗ ಅದನ್ನು ಹೇಗೆ ಒಪ್ಪಬಹುದು? ಅದರಲ್ಲೂ ಬೇರಾವ ಜನತೆಯು ಗ್ರಹಿಸಲಾರದಷ್ಟು ತುಳಿಯಲ್ಪಟ್ಟ ನೀಗ್ರೋಗಳು ಹೇಗೆ ಈಸ್ಟ್‌ಲ್ಯಾಂಡ್‌ನ ಮಾತನ್ನು ಕೇಳಬಹುದು ?

ವರ್ಣಭೇಧವಿರದ ಒಂದು ದೇಶದತ್ತ, ವರ್ಣೀಯರನ್ನೇ ನಿರ್ಮೂಲನ ಮಾಡಬೇಕೆಂದಿರುವ ಪಾಶ್ಚಿಮಾತ್ಯ ಬಿಳಿ ಹುಡುಗರನ್ನು ಹಿಂದಕ್ಕೆ ಎಳೆದಿಟ್ಟಿರುವ ಒಂದು ದೇಶದತ್ತ ಸ್ನೇಹಾಕಾಂಕ್ಷೆ ತಳೆಯಕೂಡದೆಂದರೆ ಅದು ನನ್ನಿಂದ ಹೇಗೆ ಸಾಧ್ಯ !" ಎಂದು ರೋಬ್ಸನ್ ಪ್ರಶ್ನಿಸುತ್ತಾನೆ.

ರೋಬ್ಸನ್ ರಷ್ಯದ ಬಗ್ಗೆ ಅನ್ನುತ್ತಾನೆ: 'ಸಾವಧಾನ ನನ್ನೊಡನೆಯೂ ಕೆಲವು ಬಾಂಬುಗಳಿವೆ" ಎಂದವರು ಎಚ್ಚರಿಕೆ ಈಯದಿದ್ದರೆ, ಫ್ರೆಂಚರು ಒಂದಂಗುಲದಷ್ಟು ವಸಾಹತು ಪ್ರದೇಶವನ್ನು ಬಿಟ್ಟುಕೊಡುತ್ತಿರಲಿಲ್ಲ; ಪೋರ್ಚುಗೀಸರೂ ಅಷ್ಟೆ. ಮತ್ತು ಅಮೆರಿಕಾದ ಬಿಳಿ ವರ್ಗವು ಎಂದೋ ನೀಗ್ರೋಗಳ ಹೋರಾಟವನ್ನು ಹತ್ತಿಕ್ಕಿ ನಿರ್ಮೂಲನ ಮಾಡುತ್ತಿತ್ತು, "ಇಷ್ಟು ಹೇಳಿದ ಮಾತ್ರಕ್ಕೆ ನಾನು ಅಂತರಾಷ್ಟ್ರೀಯ ಕಾರಸ್ಥಾನದ ಪಾಲುಗಾರನಾಗುವುದಿಲ್ಲ. ಇಂತಹ ಹುಚ್ಚು ಮಾತನ್ನು ಕೇಳಲು ನಾನು ಸಿದ್ಧನಿಲ್ಲ. ನೀಗ್ರೊ ಸಮೂಹಕ್ಕೆ ನಾನು ಹೇಳುವುದಿಷ್ಟೆ: ನಾನು ಸೋವಿಯತ್ ರಷ್ಯದ ನಿಕಟ ಗೆಳೆಯ, ಅವರನ್ನುಬಹಳವಾಗಿ ಮೆಚ್ಚುವಾತ. ಡಲ್ಲೆಸ್ ಸ್ಪೆಯಿನಿನ ಫ್ರಾಂಕೊ, ಕ್ಯೂಬಾದ ಸರ್ವಾಧಿಕಾರಿ ಬಾಟಿಸ್ಟಾನನ್ನು ನೋಡಲು ಹೋಗಬಹುದು. ಒಳ್ಳೆಯದು.

ನನ್ನ ಮಟ್ಟಿಗೆ ನಾನು ರಷ್ಯನ್ ಮತ್ತು ಚೀನಿಯರನ್ನು ಮೆಚ್ಚುತ್ತೇನೆ. "ಬಹಿರಂಗವಾಗಿ ನಾನಿದನ್ನು ಅನ್ನುತ್ತೇನೆ. ಇದನ್ನು ಹೇಳಿದುದಕ್ಕೆ ಅವರು ನನ್ನನ್ನು ಜೇಲಿಗೆ ಹಾಕಲಿ; ಆದರೆ ಒಂದು ರಾಜಕೀಯ ಪಕ್ಷದ ಸದಸ್ಯ ಎಂಬ ನೆವನದ ಮೇಲೆ ಹಾಗೆ ಮಾಡುವುದಲ್ಲ."

ಆಫ್ರಿಕನರ ಸ್ವಾತಂತ್ರ್ಯಕ್ಕೆ ಸಾವಿರ ವರುಷ ಬೇಕಾದೀತೆಂದು ಪಾಶ್ಚಿಮಾತ್ಯರು ಅನ್ನುವಾಗ ರಷ್ಯ ಒಂದು ಪೀಳಿಗೆಯಲ್ಲೇನೆಲ್ಲಾ ಸಾಧ್ಯವೆಂದು ತೋರಿಸಿದೆ.

"ಸೋವಿಯತ್ ಶಾಂತಿ ಪ್ರಯತ್ನ ಅತ್ಯಂತ ನೈಜವಾದುದು, ಸತ್ಯವಾದುದು. ನಾನು ಫ್ರೆಂಚ್ ಮತ್ತು ಪೋರ್ಚುಗೀಸರ ಬಗ್ಗೆ ಹೆಚ್ಚು ಹೆದರಿಕೆಯುಳ್ಳವನಾಗಿದ್ದೇನೆ. ಈಸ್ಟ್ ಲ್ಯಾಂಡ್‌ನಂಥವರಿಂದ ನಡೆಸಲ್ಪಡುವ ನಮ್ಮ ವಿದೇಶಾಂಗ ನೀತಿಯನ್ನು ಕಂಡ ನನಗೆ, ವರ್ಣೀಯ ಜನತೆ ಸ್ವತಂತ್ರರಾಗಬಾರದೆಂದು ಪ್ರಯತ್ನಿಸುತ್ತಿರುವ ಈ ಜನರ ಕೈಯಲ್ಲಿ ಆಟಂಬಾಂಬುಗಳನ್ನು ಕಂಡ ನನಗೆ, ಶಾಂತಿಯ ಬಗ್ಗೆ ನ್ಯಾಯವಾದ ಭಯ ಮಾಡುತ್ತದೆ. ನಾನಿವರನ್ನು ಮಾತ್ರ ನಂಬಲಾರೆ. ಸೋವಿಯತ್ ಯೂನಿಯನ್ ಶಾಂತಿ ಒಪ್ಪುದಿಲ್ಲವೆಂದು ಯಾರಾದರೂ ಅಂದರೆ ನಾನಂಥವರನ್ನೆಂದಿಗೂ ನಂಬಲಾರೆ" ಎಂದು ಸುದೃಢವಾದ ಆತ್ಮವಿಶ್ವಾಸದಿಂದ ಸೋವಿಯತ್ ರಷ್ಯದ ಬಗ್ಗೆ ಅಭಿಮಾನಯುತ ಅಭಿಪ್ರಾಯವನ್ನು ಹೊರಗೆಡಹುತ್ತಾನೆ.

ಸ್ವಾತಂತ್ರ್ಯಕ್ಕಾಗಿ ಸಪ್ತಮ ಸ್ವರದಲ್ಲಿ ಹಾಡುತ್ತಾ ತನ್ನ ಮುನ್ನಡೆಯನ್ನು ತಡೆದ ಅದೇ ಅಮೆರಿಕದ ರಂಗಭೂಮಿಯಲ್ಲಿ ಪ್ರವೇಶಿಸುವುದೇ ರೋಬ್ಸನನ ಪ್ರಚಂಡಾಪೇಕ್ಷೆಯಾಗಿದೆ.

—o—

ಡಾಕ್ಟರರ ಸಂಖ್ಯೆಯಲ್ಲಿ ಪ್ರಪಂಚದಲ್ಲಿ ಪ್ರಥಮ ಸ್ಥಾನ

ರಶಿಯದಲ್ಲಿ ಕ್ರಾಂತಿಗೆ ,ಮೊದಲು ಪ್ರತಿ ೧೦,೦೦೦ ಜನರಿಗೂ ೧೩ ಆಸ್ಪತ್ರೆ ಮಂಚಗಳು ಮಾತ್ರವೇ ದೊರೆಯುವ ವ್ಯವಸ್ಥೆಯಿದ್ದಿತು. ಈಗ ಈ ಸಂಖ್ಯೆಯು ೭೦ರ ವರೆಗೆ ಏರಿದೆ. ಕ್ರಾಂತಿಗೆ ಮೊದಲು ಅಲ್ಲಿದ್ದ ೨೩,೧೦೦ ಮಂದಿ ಡಾಕ್ಟರರೊಂದಿಗೆ ಹೋಲಿಸಿ ನೋಡಿದರೆ, ಈಗ ಸೋವಿಯತ್ ಒಕ್ಕೂಟದಲ್ಲಿ ೩೪೬,೦೦೦ಕ್ಕಿಂತಲೂ ಹೆಚ್ಚು ಮಂದಿ ಡಾಕ್ಟರರು ಕೆಲಸ ಮಾಡುತ್ತಿದ್ದಾರೆ. ಡಾಕ್ಟರುಗಳ ಸಂಖ್ಯೆಯ ಬಗ್ಗೆ ಸೋವಿಯತ್ ಒಕ್ಕೂಟವು ಪ್ರಪಂಚದಲ್ಲೇ ಪ್ರಥಮ ಸ್ಥಾನವನ್ನು ಪಡೆದಿದೆ.

ರಷ್ಯಾದಲ್ಲಿ ಜನತೆಯ....

(೬ನೇ ಪುಟದಿಂದ)

ರೋಗಗಳನ್ನು ಸಂಪೂರ್ಣತಃ ಹೋಗಲಾಡಿಸಿದೆ. ಎರಡು ಅಥವಾ ಮೂರುದಶಕಗಳ ಹಿಂದೆ ಆ ಒಂದು ರೋಗವೇ ಪ್ರತಿ ವರ್ಷವೂ ಐವತ್ತು-ಅರುವತ್ತು ಲಕ್ಷ ಜನರನ್ನು ಆಹುತಿ ತೆಗೆದುಕೊಳ್ಳುತ್ತಿತ್ತು.

REG. No. M. 6867

Edited Printed and Published by C. R. Krishna Rao, at Janashakthi Printers, L—59, K. V. Temple St., Sultanpet Bangalore—2 phone : 3810